
ಜನಮನದ ದನಿ

# ಪ್ರಜೋದಯ

ಸಂಪಾದಕ : ಜೆ.ಆರ್. ಕೆಂಚೇಗೌಡ


ಗೋಲುಗಳ ಮಳೆಗರೆದ ಭಾರತ ತಂಡ, ಸುಲ್ತಾನ್ ಅಜ್ಲಾನ್ ಶಾ ಕಪ್ ಹಾಕಿ ಟೂರ್ನಿ ಲೀಗ್ ಪಂದ್ಯದಲ್ಲಿ ಶನಿವಾರ ಕೆನಡಾ ತಂಡವನ್ನು 14-3 ಗೋಲುಗಳಿಂದ ಸೋಲಿಸಿತು. ಗುಂಪಿನಲ್ಲಿ ಅಗ್ರಸ್ಥಾನ ಪಡೆದ ಭಾರತ ಫೈನಲ್ ಪ್ರವೇಶಿಸಿತು.



30 ನವೆಂಬರ್ 2025 ಭಾನುವಾರ ಬೆಲೆ ₹ 2.00 ಸಂಪುಟ : 19 ಸಂಚಿಕೆ : 259 | ಪುಟ-4 | ಹಾಸನ | E-mail : prajodayahsn@gmail.com | RNI NO: KARKAN/2007/22629



ಸರ್ಕಾರಿ ಶಾಲೆಯ ಹಾದಿಯಲ್ಲಿ ಕಲ್ಲು ಮುಳ್ಳುಗಳು! » 2



ಸೆಲ್ಸಿಯಸ್ ಎಂಬ ಹೆಸರು ಹೇಗೆ ಬಂತು? » 3



ಶೀಘ್ರದಲ್ಲೇ ಮೇಕೆದಾಟು ವಿಸ್ತೃತ ಯೋಜನಾ ವರದಿ ಸಲ್ಲಿಕೆ » 4

# ಕುರ್ಚಿ ಕದನಕ್ಕೆ ತಾತ್ಕಾಲಿಕ ವಿರಾಮ

## ಪಕ್ಷದ ಸೂಚನೆಯಂತೆ ಇಬ್ಬರು ನಡೆದುಕೊಳ್ಳಲು ತೀರ್ಮಾನಿಸಿದ್ದೇವೆ: ಸಿದ್ದರಾಮಯ್ಯ | ನಮ್ಮಿಬ್ಬರ ನಿರ್ಧಾರ ಒಂದೇ, ಯಾವುದೇ ಗುಂಪುಗಾರಿಕೆ ಇಲ್ಲ: ಡಿ.ಕೆ.ಶಿ.

• ಪ್ರಜೋದಯ ವರದಿ

**ಬೆಂಗಳೂರು:** ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಸಿಎಂ ಅಧಿಕೃತ ನಿವಾಸ ಕಾವೇರಿಯಲ್ಲಿ ಉಪಹಾರ ಕೂಟದಲ್ಲಿ ಭೇಟಿಯಾಗಿ, ಒಗ್ಗಟ್ಟಿನ ಮಂತ್ರ ಪಠಿಸಿದ್ದಾರೆ. ಆದರೆ, ನಾಯಕತ್ವ ಬದಲಾವಣೆಯ ಬಿಕ್ಕಟ್ಟು ಶೀಘ್ರದಲ್ಲೇ ಕೊನೆಗೊಳ್ಳುವ ಯಾವುದೇ ಲಕ್ಷಣಗಳು ಕಂಡುಬಂದಿಲ್ಲ.

ಡಿ.8ರಂದು ಬೆಳಗಾವಿಯಲ್ಲಿ ಪ್ರಾರಂಭವಾಗುವ ಕರ್ನಾಟಕ ವಿಧಾನಸಭೆಯ ಜಂಟಿ ಅಧಿವೇಶನದ ಹಿನ್ನಲೆ ಕಾಂಗ್ರೆಸ್ ಪಕ್ಷದ ಹೈಕಮಾಂಡ್‌ನ ಒತ್ತಾಯದ ಮೇರೆಗೆ ಮುಖ್ಯಮಂತ್ರಿ ಕುರ್ಚಿಗಾಗಿ ಆರಂಭವಾಗಿದ್ದ ಕದನಕ್ಕೆ ತಾತ್ಕಾಲಿಕ ವಿರಾಮ ಘೋಷಿಸಿದ್ದಾರೆ.

ಉಪಹಾರ ಕೂಟದ ಬಳಿಕ ನಡೆದ ಜಂಟಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, ಪಕ್ಷದ ವರಿಷ್ಠರ ತೀರ್ಮಾನ, ಸೂಚನೆಯಂತೆ ನಾನು ಹಾಗು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ನಡೆದುಕೊಳ್ಳಲು ತೀರ್ಮಾನಿಸಿದ್ದೇವೆ. ಸಚಿವರಾಗಲಿ, ಶಾಸಕರಾಗಿ ಸರ್ಕಾರದ ವಿರುದ್ಧವಿಲ್ಲ. ಕೆಲ ಶಾಸಕರು ಸಚಿವ ಸಂಪುಟ ಪುನರ್ ರಚನೆಗೆ ಸಂಬಂಧಿಸಿದಂತೆ ದೆಹಲಿಗೆ ಭೇಟಿ ನೀಡಿದರಬಹುದು. ಹಾಗೆಂದು ಬೇರೆ



ಅರ್ಥ ಕಲ್ಪಿಸಬೇಕಿಲ್ಲ. ಕೆಲವರು ಇಂಥಹ ಕಾರಣಕ್ಕೆ ಭೇಟಿ ನೀಡಿರುವುದಾಗಿ ತಿಳಿಸಿದ್ದಾರೆ ಎಂದರು.

2028ರ ವಿಧಾನಸಭಾ ಚುನಾವಣೆಗಳು ಮತ್ತು ಮುಂಬರುವ ಸ್ಥಳೀಯ ಸಂಸ್ಥೆಗಳ ಚುನಾವಣೆಗಳು ನಮಗೆ ಬಹಳ ಮುಖ್ಯ. ನಾವಿಬ್ಬರೂ ಅದರ ಬಗ್ಗೆ ಚರ್ಚಿಸಿದ್ದೇವೆ. 2023ರ ಚುನಾವಣೆಯಲ್ಲಿ ನಾವು ಕೆಲಸ ಮಾಡಿದ ರೀತಿಯಲ್ಲಿಯೇ ಒಟ್ಟಿಗೆ ಮುಂದುವರಿಯಲು ನಾವಿಬ್ಬರೂ ನಿರ್ಧರಿಸಿದ್ದೇವೆ. ನಮ್ಮ ನಡುವೆ ಯಾವುದೇ ಭಿನ್ನಾಭಿಪ್ರಾಯಗಳು ಅಥವಾ ಗೊಂದಲಗಳಿಲ್ಲ ಎಂದು ಹೇಳಿದರು.

ಡಿ.8ರಿಂದ ಬೆಳಗಾವಿಯಲ್ಲಿ ಅಧಿವೇಶನ ಪ್ರಾರಂಭವಾಗಲಿದ್ದು, ಅಲ್ಲಿನ ವಿರೋಧ ಪಕ್ಷಗಳನ್ನು ನಾವು ಬಹಳ ಪರಿಣಾಮಕಾರಿಯಾಗಿ

> **"ಅಧಿವೇಶನ ಇರುವುದರಿಂದ ಇಬ್ಬರಿಗೂ ಗೊಂದಲಗಳನ್ನು ತಿಳಿಗೊಳಿಸುವ ಕೆಲಸ ಮಾಡಲು ಪಕ್ಷದ ವರಿಷ್ಠರು ಸೂಚಿಸಿದ್ದಾರೆ. ನಾಳೆಯಿಂದ ಯಾವುದೇ ಗೊಂದಲ ಇರುವುದಿಲ್ಲ. ಈಗಲೂ ಇಲ್ಲ. ನಮ್ಮ ನಡುವೆ ಆಗಿರುವ ಒಪ್ಪಂದದ ಬಗ್ಗೆ ಹೈಕಮಾಂಡ್‌ಗೆ ಮಾಹಿತಿ ನೀಡಲಾಗುವುದು.**
> **-ಸಿದ್ದರಾಮಯ್ಯ, ಮುಖ್ಯಮಂತ್ರಿ**

ಎದುರಿಸುತ್ತೇವೆ. ಸುಳ್ಳು ಪ್ರಚಾರ, ಸುಳ್ಳು ಆರೋಪ ಮತ್ತು ಅಪಪ್ರಚಾರ ಮಾಡುವುದು ಬಿಜೆಪಿ ಮತ್ತು ಜೆಡಿಎಸ್‌ನ ಅಭ್ಯಾಸವಾಗಿದೆ ಮತ್ತು ನಾವಿಬ್ಬರೂ ಅದನ್ನು ಪರಿಣಾಮಕಾರಿಯಾಗಿ ಎದುರಿಸುತ್ತೇವೆ. ಅದಕ್ಕಾಗಿ ಅಗತ್ಯವಾದ ತಂತ್ರವನ್ನು ರೂಪಿಸಿದ್ದೇವೆಂದರು.

**ಅವಿಶ್ವಾಸ ನಿರ್ಣಯ ವಿಫಲ ಯತ್ನ**

ಇತ್ತೀಚೆಗೆ ಅಧಿಕಾರ ಹಸ್ತಾಂತರದ ಬಗ್ಗೆ ಉಂಟಾಗಿರುವ ಗೊಂದಲಗಳಿಗೆ ಮಾಧ್ಯಮಗಳೇ ಕಾರಣ ಎಂದು ಆರೋಪಿಸಿದ ಸಿದ್ದರಾಮಯ್ಯ ಅವರು, ಬಿಜೆಪಿ, ಜೆಡಿಎಸ್‌ನವರು ಪತ್ರಿಕೆಗಳಲ್ಲಿ ಅವಿಶ್ವಾಸ ನಿರ್ಣಯ ತೆಗೆದುಕೊಳ್ಳುವುದಾಗಿ ಹೇಳಿಕೆ ನೀಡಿದ್ದಾರೆ. ಇದು ಅಸಂಭವವಾಗಿದ್ದು, ನಾವು 142 ಜನರಿದ್ದೇವೆ. ಬಿಜೆಪಿಯವರು 64 ಜನ ಮಾತ್ರ, ಜೆಡಿಎಸ್ 18 ಇದ್ದಾರೆ. ಅವರಿಬ್ಬರೂ ಸೇರಿ 82 ಜನರಾಗುತ್ತಾರೆ. ಇದೊಂದು ವಿಫಲ ಪ್ರಯತ್ನ ಎಂದು ಭಾವಿಸಿದ್ದೇನೆ. ವಿರೋಧ ಪಕ್ಷಗಳು ಏನೇ ಸುಳ್ಳು ಆರೋಪಗಳನ್ನು ಮಾಡಿದರೂ ಅವನ್ನೆಲ್ಲಾ ಸಮರ್ಥವಾಗಿ ಎದುರಿಸುವ ಕೆಲಸ ಮಾಡುತ್ತೇವೆ ಎಂದರು.

### ಯಾವುದೇ ಗುಂಪುಗಾರಿಕೆ ಇಲ್ಲ

ರಾಜಕೀಯವಾಗಿ, ನಮ್ಮಿಬ್ಬರ ನಿರ್ಧಾರ ಒಂದೇ. ಹೈಕಮಾಂಡ್ ಹೇಳಿದಂತೆ ನಾವು ಕೆಲಸ ಮಾಡುತ್ತೇವೆ ಮತ್ತು ಯಾವುದೇ ಗುಂಪುಗಾರಿಕೆ ಇಲ್ಲ ಎಂದು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಹೇಳಿದರು.

ಎಸ್.ಎಂ.ಕೃಷ್ಣ ಅವರ ಅವಧಿಯಲ್ಲಿಯೂ ಗುಂಪುಗಾರಿಕೆಗೆ ಅವಕಾಶವಿರಲಿಲ್ಲ ಮತ್ತು ಇಂದಿಗೂ ಅದಕ್ಕೆ ಅವಕಾಶ ನೀಡಲಾಗುವುದಿಲ್ಲ. ಹೈಕಮಾಂಡ್ ಹೇಳಿದಂತೆ ನಾವು ಕೆಲಸ ಮಾಡು ತ್ತಿದ್ದೇವೆ. ನಾವು ಒಟ್ಟಾಗಿ ಹೋಗಿ ಪಕ್ಷವನ್ನು ಅಭಿವೃದ್ಧಿಪಡಿಸಲು ಏನು ಬೇಕಾದರೂ ಮಾಡುತ್ತೇವೆ. ಆ ವಿಷಯದಲ್ಲಿ ಸಿದ್ದರಾಮಯ್ಯ ಅವರ ಮಾತುಗಳಿಗೆ ನಾನು ಬದ್ಧನಾಗಿದ್ದೇನೆ. ಹೈಕಮಾಂಡ್ ನಮ್ಮನ್ನು ದೆಹಲಿಗೆ ಕರೆದಾ ಗಲೆಲ್ಲಾ, ಸಿದ್ದರಾಮಯ್ಯ ಮತ್ತು ನಾನು ಇಬ್ಬರೂ ಹೋಗುತ್ತೇವೆಂದು ಹೇಳಿದರು.

ನಾವು ಪಕ್ಷದ ನಿಷ್ಠಾವಂತ ಕಾರ್ಯಕರ್ತರು. ಪ್ರಸ್ತುತ ಪರಿಸ್ಥಿತಿಯಲ್ಲಿ ರಾಷ್ಟ್ರ ಮಟ್ಟದಲ್ಲಿ ಪಕ್ಷ ಕಷ್ಟದ ಸಮಯದಲ್ಲಿದೆ. ಈ ಸಂದರ್ಭದಲ್ಲಿ ಕರ್ನಾಟಕ ಮಹತ್ತರ ಪಾತ್ರ ನಿರ್ವಹಿಸಲಿದೆ. 2028ರ ಚುನಾವಣೆ ನಂತರ 2029ರ ಲೋಕ ಸಭೆ ಚುನಾವಣೆಯನ್ನು ಎಐಸಿಸಿ ಅಧ್ಯಕ್ಷರಾದ ಮಲ್ಲಿಕಾರ್ಜುನ ಖರ್ಗೆ, ರಾಹುಲ್ ಗಾಂಧಿ ಅವರ ನಾಯಕತ್ವದಲ್ಲಿ ಎದುರಿಸುತ್ತೇವೆ. ರಾಜ್ಯ ದಲ್ಲಿ 2028ಕ್ಕೆ ಹಾಗು 2029ರಲ್ಲಿ ರಾಷ್ಟ್ರ ಮಟ್ಟದಲ್ಲಿ ಪಕ್ಷವನ್ನು ಮತ್ತೆ ಅಧಿಕಾರಕ್ಕೆ ತರುವುದೇ ನಮ್ಮ ಗುರಿ. ಇಷ್ಟು ದಿನ ಒಗ್ಗಟ್ಟಿನಿಂದ ಕೆಲಸ ಮಾಡಿಕೊಂಡು ಹೋಗು ತ್ತಿದ್ದು, ಮುಂದೆಯೂ ಅದೇ ರೀತಿ ಕೆಲಸ ಮಾಡಲು ಅಚಲ ನಿರ್ಧಾರ ಕೈಗೊಂಡಿದ್ದೇ ವೆಂದು ತಿಳಿಸಿದರು.

> **"ನಾಯಕತ್ವ ವಿಚಾರದಲ್ಲಿ ನನ್ನದು ಹಾಗು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರದ್ದು ಒಂದೇ ರಾಜಕೀಯ ನಿಲುವಾಗಿದ್ದು, ಪಕ್ಷದ ವರಿಷ್ಠರು ಹೇಳಿದಂತೆ ನಾವಿಬ್ಬರು ನಡೆಯುತ್ತೇವೆ.**
> **- ಡಿ.ಕೆ.ಶಿವಕುಮಾರ್, ಉಪಮುಖ್ಯಮಂತ್ರಿ**

# 20 ದಿನ ಅಧಿವೇಶನ ನಡೆಸಿ: ಜೆಡಿಎಸ್-ಬಿಜೆಪಿ ಒತ್ತಾಯ

• ಪ್ರಜೋದಯ ವರದಿ

**ಬೆಂಗಳೂರು:** ಬೆಳಗಾವಿ ಅಧಿವೇಶನವನ್ನು ಕನಿಷ್ಠ 20 ದಿನ ನಡೆಸಬೇಕು. ಉತ್ತರ ಕರ್ನಾಟಕದ ಸಮಸ್ಯೆಗಳ ಚರ್ಚೆಗೆ ಹೆಚ್ಚಿನ ಅವಕಾಶ ನೀಡಬೇಕೆಂದು ಬಿಜೆಪಿ ಮತ್ತು ಜೆಡಿಎಸ್ ಆಗ್ರಹಿಸಿವೆ.

ಬೆಳಗಾವಿಯ ಸುವರ್ಣಸೌಧದಲ್ಲಿ ನಡೆಯಲಿರುವ ಚಳಿಗಾಲದ ಅಧಿವೇಶನಕ್ಕೆ ಪೂರ್ವಸಿದ್ಧತೆ ಮಾಡಿಕೊಳ್ಳಲು ಬಿಜೆಪಿ ಮತ್ತು ಜೆಡಿಎಸ್ ಸಮನ್ವಯ ಸಮಿತಿ ಸಭೆ ಶನಿವಾರ ನಡೆಯಿತು. ಸಭೆಯ ನಂತರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಅವರು, 10 ದಿನ ಅಧಿವೇಶನ ನಡೆಸಲು ಸರ್ಕಾರವು ಸಿದ್ಧತೆ ಮಾಡಿಕೊಂಡಿದೆ. ಉತ್ತರ ಕರ್ನಾಟಕಕ್ಕೆ ಸಂಬಂಧಿಸಿದ 10-12 ಗಂಭೀರ ಸಮಸ್ಯೆಗಳು ಇದ್ದು, ಅವುಗಳ ಚರ್ಚೆಗೆ ಇಷ್ಟು ಕಡಿಮೆ ಅವಧಿ ಸಾಲುವುದಿಲ್ಲ. ಹೀಗಾಗಿ 20 ದಿನವಾದರೂ ಅಧಿವೇಶನ ನಡೆಸಬೇಕು ಎಂದರು.

ವಿಧಾನಸಭೆಯ ವಿರೋಧ ಪಕ್ಷದ ನಾಯಕ ಆರ್.ಅಶೋಕ ಅವರು ಮಾತನಾಡಿ, ಕಾಟಾಚಾ ರಕ್ಕಾಗಿ ಈ ಅಧಿವೇಶನ ನಡೆಸುತ್ತಿದ್ದಾರೆ. ಉತ್ತರ



ಕರ್ನಾಟಕದ ಸಮಸ್ಯೆಗಳ ಬಗ್ಗೆ ಚರ್ಚೆ ಮಾಡಬೇಕೆಂದು ಬೆಳಗಾವಿ ಅಧಿವೇಶನ ಆರಂಭಿಸಲಾಗಿತ್ತು. ಕಾಂಗ್ರೆಸ್ ಸರ್ಕಾರವು ಅಲ್ಲಿಯೂ ಬೆಂಗಳೂರಿನ ಸಮಸ್ಯೆಗಳನ್ನೇ ಚರ್ಚೆಗೆ ಎತ್ತಿಕೊಳ್ಳುತ್ತದೆಂದು ಅಸಮಾಧಾನ ವ್ಯಕ್ತಪಡಿಸಿದರು.

2028ರ ಚುನಾವಣೆಯಲ್ಲಿ ಜೆಡಿಎಸ್ ಅನ್ನು ಸ್ವತಂತ್ರವಾಗಿ ಅಧಿಕಾರಕ್ಕೆ ತರಬೇಕೆಂದು ಪಕ್ಷದ ನಾಯಕರು ಕರೆ ನೀಡಿರುವ ಬಗ್ಗೆ ಕೇಳಿದ ಪ್ರಶ್ನೆಗೆ ಎರಡೂ ಪಕ್ಷದ ನಾಯಕರು ಉತ್ತರಿಸಲು ನಿರಾಕರಿಸಿದರು. ಅಧಿವೇಶನದಲ್ಲಿ ಸರ್ಕಾರದ ವಿರುದ್ಧ ಅವಿಶ್ವಾಸ ಗೊತ್ತುವಳಿ ನಿರ್ಣಯ ಮಂಡಿಸುವ ಬಗ್ಗೆ ಕೇಳಿದ ಪ್ರಶ್ನೆಗೂ ಪ್ರತಿಕ್ರಿಯೆ ನೀಡಲಿಲ್ಲ.

# ಗ್ಯಾರಂಟಿ ಯೋಜನೆ ದೇಶಕ್ಕೆ ಮಾದರಿ: ಬಿ.ಶಿವರಾಮ್

• ಪ್ರಜೋದಯ ವರದಿ

**ಬೇಲೂರು:** ರಾಜ್ಯ ಕಾಂಗ್ರೆಸ್ ಸರ್ಕಾರ ಐದು ಗ್ಯಾರಂಟಿಗಳನ್ನು ಅತ್ಯಂತ ಸಮರ್ಪಕವಾಗಿ ನಿರ್ವಹಿಸುವ ಮೂಲಕ ದೇಶಕ್ಕೆ ಮಾದರಿಯಾಗಿದೆ. ಮುಂಬರುವ ಜಿಲ್ಲಾ ಮತ್ತು ತಾಲ್ಲೂಕು ಪಂಚಾಯಿತಿ ಚುನಾವಣೆಯಲ್ಲೂ ಕಾಂಗ್ರೆಸ್ ಜಯಭೇರಿ ಖಚಿತ ಎಂದು ಮಾಜಿ ಸಚಿವ ಬಿ.ಶಿವರಾಮ್ ಅವರು ವಿಶ್ವಾಸ ವ್ಯಕ್ತಪಡಿಸಿದರು.

ತಾಲ್ಲೂಕಿನ ಹಗರೆ ಕೇಂದ್ರದಲ್ಲಿ ಮಾದಿಹಳ್ಳಿ ಹೋಬಳಿ ಕಾಂಗ್ರೆಸ್ ಕಾರ್ಯಕರ್ತರ ಸಭೆಯಲ್ಲಿ ಮಾತನಾಡಿ ಅವರು, ಮುಂಬರುವ ಎಲ್ಲಾ ಸ್ಥಳೀಯ ಸಂಸ್ಥೆ ಹಾಗು 2028ಕ್ಕೂ ಕೂಡ ರಾಜ್ಯದಲ್ಲಿ ಕಾಂಗ್ರೆಸ್ ಬಹುಮತ ಪಡೆಲಿದೆ ಎಂದು ಹೇಳಿದರು.

ರಾಜ್ಯದಲ್ಲಿ ಅಸ್ತಿತ್ವಕ್ಕೆ ಬಂದ ಕಾಂಗ್ರೆಸ್ ಸರ್ಕಾರ ಕೊಟ್ಟ ಮಾತಿನಂತೆ ಐದು ಗ್ಯಾರಂಟಿಗಳನ್ನು ರಾಜ್ಯದ ಎಲ್ಲಾ ಜನತೆಗೆ ಪಕ್ಷ, ಜಾತಿ, ಧರ್ಮ, ವರ್ಗವಿಲ್ಲದೆ ಗ್ಯಾರಂಟಿ ಫಲಾನುಭವಿಗಳಾಗಿದ್ದಾರೆ. ಇಂತಹ ಮಹತ್ವಪೂರ್ಣ ಯೋಜನೆಯನ್ನು ಮುಂದಿನ 2028ರಲ್ಲಿ ಪುರುಷರಿಗೆ ಶಕ್ತಿ ಯೋಜನೆ ಫಲ ನೀಡುವ ಕಾರಣದಿಂದ ಉಚಿತ ಬಸ್ ಸೌಲಭ್ಯ ನೀಡಲಾಗುತ್ತದೆಂಬ ಆಶಾಭಾವನೆ ವ್ಯಕ್ತಪಡಿಸಿದರು.

ನಾನು ಯಾವುದೇ ಸರ್ಕಾರ ಇರಲಿ ರೈತರಿಗೆ ಅನ್ಯಾಯವಾದ ಸಂದರ್ಭದಲ್ಲಿ ಹೋರಾಟ ನಡೆಸುತ್ತಾ ಬಂದಿರುವ ಬಗ್ಗೆ ತಿಳಿಸಿದ ಅವರು ಈಗಾಗಲೇ ತಾಲ್ಲೂಕಿನ ಶಿವಪುರ ಮತ್ತು ಅಡಗೂರು ಭಾಗದಲ್ಲಿ ರೈತಾಪಿ ವರ್ಗವನ್ನು ಒಕ್ಕಲ್ಬಿಸಲು ಅರಣ್ಯ ಇಲಾಖೆ ಮುಂದಾಗಿದ್ದು, ನಾನೇ



ಖುದ್ದು ನಿಂತು ನ್ಯಾಯ ಕೊಡಿಸಿರುವೆ ಎಂದು ಹೇಳಿದರು.

ಕಾಂಗ್ರೆಸ್ ಮುಖಂಡ ಸೈಯದ್ ತೌಫಿಕ್ ಮಾತನಾಡಿ, ಬಿಜೆಪಿ ನೇತೃತ್ವದ ಎನ್‌ಡಿಎ ಒಕ್ಕೂಟ ಬಿಹಾರದ ಚುನಾವಣೆಯಲ್ಲಿ ಸರ್ಕಾರ ಖಜಾನೆಯಿಂದ ಮತದಾರರಿಗೆ ಹಣ ನೀಡಿ ವಾಮ ಮಾರ್ಗದಿಂದ ಜಯ ಪಡೆದಿದ್ದಾರೆ. ರಾಜ್ಯದಲ್ಲಿ ನಮ್ಮ ಸರ್ಕಾರ ಸುಭದ್ರವಾಗಿದೆ. ಅದನ್ನು ಸಹಿಸದ ಬಿಜೆಪಿ ಮತ್ತು ಜೆಡಿಎಸ್ ಜನರನ್ನು ದಿಕ್ಕು ತಪ್ಪಿಸುವ ತಂತ್ರಗಾರಿಕೆಗೆ ಜನರು ಗಮನ ನೀಡುವುದು ಬೇಡ. ಕಾಂಗ್ರೆಸ್ ಪಕ್ಷ ಕಾರ್ಯಕರ್ತರಿಂದಲೇ ದೇಶದಲ್ಲಿ ಬಲಿಷ್ಠವಾಗಿದೆ. ಜಿಲ್ಲೆಯಲ್ಲಿ ಕಾಂಗ್ರೆಸ್ ಪಕ್ಷದ ಸಂಘಟನೆಗೆ ಮಾಜಿ ಸಚಿವ ಬಿ.ಶಿವರಾಮ್ ಕೊಡುಗೆ ಅಪಾರ. ಅವರ ಮಾರ್ಗದರ್ಶನದಲ್ಲಿ ಪಕ್ಷ ಬೇಲೂರಿನಲ್ಲಿ ಅಧಿಕಾರ ಹಿಡಿಯುವ ದಿನ ಹತ್ತಿರವಿದೆ ಎಂಬ ವಿಶ್ವಾಸ ವ್ಯಕ್ತಪಡಿಸಿದರು.

ಗ್ಯಾರಂಟಿ ಅನುಷ್ಠಾನ ಸಮಿತಿ ಅಧ್ಯಕ್ಷ ದೇಶಾಣಿ ಆನಂದ್, ರಾಜ್ಯ ಸಫಾಯಿ ಕರ್ಮಚಾರಿ ಆಯೋಗದ ಮಾಜಿ ಅಧ್ಯಕ್ಷ ಎಂ.ಆರ್.ವೆಂಕಟೇಶ, ತಾಲ್ಲೂಕು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಂ.ಜೆ.ನಿಶಾಂತ್, ರಾಮೇಗೌಡ, ಭೀಮೇಗೌಡ, ರವೀಶ್ ಬಸವಾಪುರ, ಬಿ.ಎಂ.ಸಂತೋಷ್, ಸೌಮ್ಯ ಆನಂದ್, ಚೇತನ್, ಜಿ.ಶಾಂತಕುಮಾರ್, ಬಿ.ಎಂ. ರಂಗನಾಥ್, ಯಮಸಂಧಿ ಪಾಪಣ್ಣ ಹಾಜರಿದ್ದರು.

# ತಂಬಾಕು ಹರಾಜು ಮಾರುಕಟ್ಟೆಯಲ್ಲಿ ಬೇಕಾಬಿಟ್ಟಿ ಖರೀದಿ

## ರಾಮನಾಥಪುರ ಬೆಳೆಗಾರರ ಆರೋಪ | ಸೂಕ್ತ ಬೆಲೆ ನೀಡುವಂತೆ ಆಗ್ರಹ

• ಪ್ರಜೋದಯ ವರದಿ

**ಅರಕಲಗೂಡು:** ತಾಲ್ಲೂಕಿನ ರಾಮನಾಥಪುರ ತಂಬಾಕು ಹರಾಜು ಮಾರುಕಟ್ಟೆಯಲ್ಲಿ ಬೇಕಾಬಿಟ್ಟಿ ಬೆಲೆಗೆ ಬೇಲ್‌ಗಳನ್ನು ಕಂಪನಿಯವರು ಖರೀದಿಸುತ್ತಿದ್ದಾರೆಂದು ತಂಬಾಕು ಬೆಳೆಗಾರರು ಅಸಮಾಧಾನ ವ್ಯಕ್ತಪಡಿಸಿ, ಸೂಕ್ತ ಬೆಲೆ ನೀಡುವಂತೆ ಆಗ್ರಹಿಸಿದ್ದಾರೆ.

ಪ್ರಸಕ್ತ ಸಾಲಿನ ಮಾರುಕಟ್ಟೆ ಆರಂಭವಾಗಿ ಒಂದು ತಿಂಗಳು ಕಳೆದಿದೆ. ತಂಬಾಕಿಗೆ ನಿರೀಕ್ಷಿತ ಬೆಲೆಯನ್ನು ನೀಡಿಲ್ಲ. ಪ್ರಮುಖವಾಗಿ ಕೆಳದರ್ಜೆಯ ತಂಬಾಕು ಮತ್ತು ಎನ್ ಒಜಿ ದರ್ಜೆಯ ತಂಬಾಕನ್ನು ಕೊಳ್ಳುತ್ತಿಲ್ಲ. ಅದರಿಂದ ತಂಬಾಕು ಬೆಳೆಗಾರರಿಗೆ ಸಮಸ್ಯೆಯಾಗುತ್ತಿದೆಂದು ದೂರಿದ್ದಾರೆ.

ಈ ಬಾರಿ ತಂಬಾಕು ಸೊಪ್ಪಿಗೆ ಆಂಧ್ರಪ್ರದೇಶ ಹರಾಜು ಮಾರುಕಟ್ಟೆಯಲ್ಲಿ 350 ರಿಂದ 430 ರೂ. ನೀಡಿ



ಬೇಲ್ ಖರೀದಿಸಲಾಗುತ್ತಿದೆ. ಆದರೆ, ನಮ್ಮ ತಂಬಾಕು ಹರಾಜು ಮಾರುಕಟ್ಟೆಯಲ್ಲಿ ಬೇಲ್‌ಗಳಿಗೆ ಕನಿಷ್ಠ 230 ರಿಂದ 260 ರೂ. ನೀಡಲಾಗುತ್ತಿದೆ. 5ನೇ ಗ್ರೇಡ್ ಬೇಲ್‌ಗಳಿಗೆ ಮಾತ್ರ 320 ರೂ. ದೊರೆಯುತ್ತಿದೆ. ಇದು ದೊಡ್ಡ ಪ್ರಮಾಣದ ಬೆಲೆಯ ಅಂತರ ಎಂದು ದೂರಿದ್ದಾರೆ.

ತಂಬಾಕು ಹರಾಜು ಮಾರುಕಟ್ಟೆಯಲ್ಲಿ ವೈಜಾನಿಕ ಬೆಲೆ ಕನಿಷ್ಠ 300 ರೂ. ನಿಂದ 350 ರೂ. ನೀಡುವಂತೆ ಪ್ರತಿಭಟನೆ ಮಾಡಿದರೂ ಸೂಕ್ತ ಬೆಲೆ ನೀಡುತ್ತಿಲ್ಲ. ತಂಬಾಕು ಮಾರುಕಟ್ಟೆಯ ಆಡಳಿತವೂ ಸಂಪೂರ್ಣವಾಗಿ ಕೇಂದ್ರ ಸರ್ಕಾರಕ್ಕೆ ಒಳಪಟ್ಟಿದೆ. ತಂಬಾಕು ಬೆಳೆಗಾರರ ಹಿತ ಕಾಪಾಡುವಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರ, ಜನಪ್ರತಿನಿಧಿಗಳು ನಿರ್ಲಕ್ಷ್ಯ ವಹಿಸಿದ್ದಾರೆ. ಜಿಲ್ಲೆಯಿಂದ ಆಯ್ಕೆಗೊಂಡಿರುವ ಸಂಸದರು ಶ್ರೇಯಸ್ ಪಾಟೀಲ್ ಅವರು ರೈತರ ಬಗ್ಗೆ ಕಾಳಜಿ ವಹಿಸಿ ಕೇಂದ್ರ ಸರ್ಕಾರದ ಗಮನ ಸೆಳೆಯುವಂತೆ ತಂಬಾಕು ಬೆಳೆಗಾರರು ಒತ್ತಾಯಿಸಿದ್ದಾರೆ.

> **"ರಾಮನಾಥಪುರ ತಂಬಾಕು ಹರಾಜು ಮಾರುಕಟ್ಟೆಯಲ್ಲಿ 1 ರಿಂದ 4ನೇ ಗ್ರೇಡ್‌ವರೆಗೆ ಕನಿಷ್ಠ 240 ರಿಂದ ಗರಿಷ್ಠ 320 ರೂ.ಗೆ ತಂಬಾಕು ವಹಿವಾಟು ನಡೆಯುತ್ತಿದೆ. 5ನೇ ಗ್ರೇಡ್ ಎನ್ ಒಜಿ ಗ್ರೇಡ್ ತಂಬಾಕನ್ನು ಕೆಲವು ಕಂಪನಿಯಯವರು ಕೊಳ್ಳಲು ಮಧ್ಯಮ ಮತ್ತು ಕೆಳದರ್ಜೆಯ ತಂಬಾಕು ಖರೀದಿಗೆ ವರ್ತಕರು ಸ್ಯಾಂಪಲ್ ಕಳುಹಿಸಿದ್ದಾರೆ. ಸದ್ಯದಲ್ಲೇ ಖರೀದಿ ಪ್ರಕ್ರಿಯೆ ಸಿಕ್ಕ ತಕ್ಷಣ ತಂಬಾಕು ಸೊಪ್ಪನ್ನು ಮುಂದಿನ ದಿನಗಳಲ್ಲಿ ಕಂಪನಿಯವರು ತೆಗೆದುಕೊಳ್ಳಲಿದ್ದಾರೆ.**
> **-ವೈ.ಜೆ.ಸವೀತ ಹರಾಜು ಅಧೀಕ್ಷಕರು, ರಾಮನಾಥಪುರ**

# ಇಂದು ಪತ್ರಕರ್ತರ ಸಂಘದ ಪದಾಧಿಕಾರಿಗಳ ಪದಗ್ರಹಣ

• ಪ್ರಜೋದಯ ವರದಿ

**ಹಾಸನ:** ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ನೂತನ ಪದಾಧಿಕಾರಿಗಳ ಪದಗ್ರಹಣ ಸಮಾರಂಭ ಭಾನುವಾರ ಬೆಳಿಗ್ಗೆ 11 ಗಂಟೆಗೆ ನಗರದ ಕೈಗಾರಿಕಾ ಪ್ರದೇಶದಲ್ಲಿರುವ ಪವನಪುತ್ರ ಸಭಾಂಗಣದಲ್ಲಿ ನಡೆಯಲಿದೆ.

ವಿಧಾನ ಪರಿಷತ್ ಸದಸ್ಯ ಕೆ.ಶಿವಕುಮಾರ್ ಅವರು ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ. ಪತ್ರಕರ್ತರ ಸಂಘದ ರಾಜ್ಯಾಧ್ಯಕ್ಷ ಟಿ.ವಿ. ಶಿವಾನಂದ ತಗಡೂರು ಅವರು ದಿಕ್ಸೂಚಿ ಭಾಷಣ ಮಾಡಲಿದ್ದಾರೆ. ಸಂಘದ ನೂತನ ಜಿಲ್ಲಾಧ್ಯಕ್ಷ ಜೆ.ಆರ್.ಕೆಂಚೇಗೌಡ ಅವರು ಅಧ್ಯಕ್ಷತೆ ವಹಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಪತ್ರಕರ್ತರ ಸಂಘದ ರಾಜ್ಯ ಉಪಾಧ್ಯಕ್ಷರಾದ ಹೆಚ್.ಬಿ.ಮದನಗೌಡ, ಮತ್ತಿಕೆರೆ ಜಯ ರಾಮ್, ಅಜ್ಜಮಾಡ ರಮೇಶ್ ಕುಟ್ಟಪ್ಪ, ಪ್ರಧಾನ ಕಾರ್ಯದರ್ಶಿ ಜಿ.ಜಿ. ಲೋಕೇಶ್ ಅವರು ಆಗಮಿಸಲಿದ್ದಾರೆ. ಪತ್ರಕರ್ತರ ಸಂಘದ ರಾಜ್ಯ ಚುನಾವಣಾಧಿಕಾರಿ ರವಿ ಕುಮಾರ್ ಎನ್.ಟೆಲಕ್ಸ್, ಜಿಲ್ಲಾ ಚುನಾವಣಾಧಿಕಾರಿ ಡಿ.ಜೆ.ರಾಜ್‌ಗೋಪಾಲ್, ಸಹಾಯಕ ಚುನಾವಣಾಧಿಕಾರಿ ಕೆ.ಎಂ.ಮೋಹನ್ ಅವರಿಗೆ ಸನ್ಮಾನ ಹಮ್ಮಿಕೊಳ್ಳಲಾಗಿದೆ.

# ಎಫ್‌ಸಿ ಶುಲ್ಕ ಹೆಚ್ಚಳ: ಲಾರಿ ಮಾಲೀಕರ ಪ್ರತಿಭಟನೆ

• ಪ್ರಜೋದಯ ವರದಿ

**ಹಾಸನ:** ಕೇಂದ್ರ ಸರ್ಕಾರ ಲಾರಿಗಳ ಫಿಟ್ನೆಸ್ ಸರ್ಟಿಫಿಕೇಟ್ (ಎಫ್.ಸಿ) ಶುಲ್ಕ ಹೆಚ್ಚಳ ಮಾಡಿ ರುವುದನ್ನು ಖಂಡಿಸಿ ಹಾಸನ ಗೂಡ್ಸ್ ಶೆಡ್ ಲಾರಿ ಮಾಲೀಕರ ಸಂಘದ ವತಿಯಿಂದ ಜಿಲ್ಲಾಧಿ ಕಾರಿ ಕಚೇರಿ ಎದುರು ಶನಿವಾರ ಪ್ರತಿಭಟನೆ ನಡೆಸಲಾಯಿತು.

ಕೇಂದ್ರ ಸರ್ಕಾರ ನ.17ರಿಂದ ಲಾರಿಗಳ ಫಿಟ್ನೆಸ್ ಸರ್ಟಿಫಿಕೇಟ್ ಶುಲ್ಕವನ್ನು ಹೆಚ್ಚಳ ಗೊಳಿಸಿದೆ. ಹೆಚ್ಚುವರಿ ಶುಲ್ಕವನ್ನು ಪಾವತಿಸಲು ಲಾರಿ ಮಾಲೀಕರಿಗೆ ಅಸಾಧ್ಯವಾಗಿದ್ದು,





ಶುಲ್ಕ ಹೆಚ್ಚಳದಿಂದ ಲಾರಿ ಮಾಲೀಕರಿಗೆ ತೀವ್ರ ತೊಂದರೆಯಾಗಿದೆ ಎಂದು ಕೇಂದ್ರ ಸರ್ಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ಸದ್ಯದ ಪರಿಸ್ಥಿತಿಯಲ್ಲಿ ದೈನಂದಿನ ಜೀವನ ಸಾಗಿಸಲು ಬೇಕಾಗಿರುವ ಅಗತ್ಯ ವಸ್ತುಗಳ ಬೆಲೆ ಹೆಚ್ಚಳವಾಗಿರುವುದರಿಂದ ಈಗ ಕೇಂದ್ರ ಸರ್ಕಾರವು ಹೆಚ್ಚಳಗೊಳಿಸಿರುವ ಶುಲ್ಕ ಭರಿಸಲು ಲಾರಿ ಮಾಲೀಕರಿಗೆ ಸಾಧ್ಯವಾಗದೇ ಇರುವ ಕಾರಣ, ಈ ಹಿಂದೆ ಇದ್ದ ಶುಲ್ಕವನ್ನೇ ಮುಂದುವರೆಸಬೇಕೆಂದು ಒತ್ತಾಯಿಸಿ ಜಿಲ್ಲಾಡಳಿತಕ್ಕೆ ಮನವಿ ಸಲ್ಲಿಸಿದರು.

ಕರ್ನಾಟಕ ಗೂಡ್ಸ್ ಶೆಡ್ ಲಾರಿ ಮಾಲೀಕರ ಸಂಘದ ಅಧ್ಯಕ ಕೆ.ಕೆ. ಸುರೇಶ್, ಉಪಾಧ್ಯಕ್ಷ ಶೇಕ್ ಅಹಮ್ಮದ್, ನಿರ್ದೇಶಕ ಮಂಜುನಾಥ್ ಸೇರಿ ಲಾರಿ ಮಾಲೀಕರು ಹಾಗು ಚಾಲಕರು ಇದ್ದರು.

# ಡಿ.ಟಿ.ಶ್ರೀನಿವಾಸ್‌ಗೆ ಸಚಿವ ಸ್ಥಾನ ನೀಡಲು ಆಗ್ರಹ

• ಪ್ರಜೋದಯ ವರದಿ

**ಹಾಸನ:** ಸಚಿವ ಸಂಪುಟ ಪುನರಾಚನೆ ವೇಳೆ ರಾಜ್ಯ ಗೊಲ್ಲರ ಸಂಘದ ರಾಜ್ಯಾಧ್ಯಕ್ಷ, ವಿಧಾನ ಪರಿಷತ್ ಸದಸ್ಯ ಡಿ.ಟಿ.ಶ್ರೀನಿವಾಸ್ ಅವರಿಗೆ ಸಚಿವ ಸ್ಥಾನ ನೀಡಬೇಕೆಂದು ಜಿಲ್ಲಾ ಗೊಲ್ಲ (ಯಾದವ) ಸಂಘದ ಉಪಾಧ್ಯಕ್ಷ ಹೊನ್ನೇಗೌಡ ಅವರು ಒತ್ತಾಯಿಸಿದರು.

ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ರಾಜ್ಯದಲ್ಲಿ ಯಾದವ (ಗೊಲ್ಲ) ಸಮುದಾಯ 19 ಲಕ್ಷಕ್ಕೂ ಅಧಿಕ ಸಂಖ್ಯೆಯಲ್ಲಿದೆ. ಆದರೂ ರಾಜಕೀಯವಾಗಿ ಪ್ರಾತಿನಿಧ್ಯ ಇಲ್ಲದಂತಾಗಿದೆ. ನಾಡಿನ ಯಾದವ ಸಮುದಾಯದ ನಾಯಕ ದಿ||ಎ.ಕೃಷ್ಣಪ್ಪ ಅವರ ನಂತರ ರಾಜ್ಯ ಗೊಲ್ಲ ಸಂಘದ ನೇತೃತ್ವವನ್ನು ಡಿ.ಟಿ.ಶ್ರೀನಿವಾಸ್ ಅವರು ವಹಿಸಿದ್ದಾರೆ. ಚುನಾವಣೆ ಮೂಲಕ ಆಯ್ಕೆ ಯಾದ ಮೊದಲ ಅಧ್ಯಕ್ಷರಾಗಿ ಮುನ್ನಡೆಸುತ್ತಿದ್ದಾರೆಂದು ಹೇಳಿದರು.





ಡಿ.ಟಿ.ಶ್ರೀನಿವಾಸ ಅವರ ನೇತೃತ್ವದಲ್ಲಿ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಪ್ರವಾಸ ಕೈಗೊಂಡು ಅವರ ನೇತೃತ್ವದಲ್ಲಿ ತುಮಕೂರು, ಚಿತ್ರದುರ್ಗ, ಚಿಕ್ಕೋಡಿಗಳಲ್ಲಿ ರಾಜ್ಯ ಗೊಲ್ಲ ಸಮಾವೇಶ ಮಾಡಿ ಸಮಾಜ ಸಂಘಟನೆ ಮಾಡಿದ್ದಾರೆ. 2024ರಲ್ಲಿ ನಡೆದ ಕರ್ನಾ ಟಕ ಆಗ್ನೇಯ ಶಿಕ್ಷಕರ ಕ್ಷೇತ್ರದ ಎಂ.ಎಲ್.ಸಿ. ಚುನಾವಣೆಯಲ್ಲಿ ಇದುವರೆವಿಗೂ ಕಾಂಗ್ರೆಸ್ ಜಯಸಾಧಿಸಿರಲಿಲ್ಲ. ಅವರು ಮೊದಲ ಬಾರಿಗೆ ಕಾಂಗ್ರೆಸ್ ಗೆಲ್ಲಿಸಿ ದರು. ಅನೇಕ ಚುನಾವಣೆಗಳಲ್ಲಿ ತಮ್ಮ ಚಾಣಾಕ್ಷ ತಂತ್ರಗಳಿಂದ ಯಶಸ್ಸು ಸಾಧಿಸಿದ್ದಾರೆಂದು ತಿಳಿಸಿದರು.

ರಾಜ್ಯದಲ್ಲಿ ಹಿಂದುಳಿದ ಪ್ರವರ್ಗ-1ರ ಜಾತಿಗಳ ಒಕ್ಕೂಟದ ಅಧ್ಯಕ್ಷರಾಗಿ ಸುಮಾರು 95ಕ್ಕೂ ಹೆಚ್ಚು ಅತೀ ಹಿಂದುಳಿದ ಸಮಾಜ ಸಂಘಟಿಸಿ ಅವರನ್ನು ಮುನ್ನೆಲೆಗೆ ತರಲು ಶ್ರಮಿಸುತ್ತಿದ್ದಾರೆ. ಅಂತಹ ವರನ್ನು ಕಾಂಗ್ರೆಸ್ ಸರ್ಕಾರ ಪರಿಗಣಿಸಬೇಕು. ಈ ಹಿಂದಿನಿಂದಲೂ ಗೊಲ್ಲ ಸಮುದಾಯವನ್ನು ಎಲ್ಲಾ ರಾಜಕೀಯ ಪಕ್ಷಗಳು ಕಡೆಗಣಿಸಿದ್ದು, ಕಾಂಗ್ರೆಸ್ ಸರ್ಕಾರವಾದರೂ ಶ್ರೀನಿವಾಸ್ ಅವರ ಸಂಘಟನೆ, ಪಕ್ಷ ನಿಷ್ಠೆ ಹಾಗೂ ಹೋರಾಟ ಪರಿಗಣಿಸಿ ಸಚಿವ ಸಂಪುಟ ವಿಸ್ತರಣೆಯಲ್ಲಿ ಹಿಂದುಳಿದ ಸಮಾಜಗಳ ಪ್ರತಿನಿಧಿಯಾಗಿ ಸಚಿವ ಸ್ಥಾನ ನೀಡಬೇಕೆಂದು ಆಗ್ರಹಿಸಿದರು.

ಸಂಘದ ಪದಾಧಿಕಾರಿಗಳಾದ ಕೃಷ್ಣಪ್ಪ, ಗೋವಿಂದರಾಜು, ಕೇಶವೇಗೌಡ, ನರಸಿಂಹಮೂರ್ತಿ ಇದ್ದರು.

# ಕಡೇಗರ್ಜೆ ಭಾಗದಲ್ಲಿ ಕಾಡುಕೋಣಗಳ ಹಿಂಡು ಪ್ರತ್ಯಕ್ಷ

• ಪ್ರಜೋದಯ ವರದಿ



**ಅರೇಹಳ್ಳಿ:** ಬೇಲೂರು ತಾಲ್ಲೂಕಿನ ಅರೇಹಳ್ಳಿ ಹೋಬಳಿಯ ಕಡೇಗರ್ಜೆ ಗ್ರಾಮದ ಗಡಿ ಭಾಗದಲ್ಲಿರುವ ಗುಡ್ ಪೇಟಾ ಎಸ್ಟೇಟ್ ಸುತ್ತಮುತ್ತ ಕೆಲ ದಿನಗಳಿಂದ ಕಾಡುಕೋಣಗಳ ಗುಂಪು ಕಾಣಿಸಿಕೊಂಡು ಜನರಲ್ಲಿ ಆತಂಕ ಮೂಡಿಸಿವೆ.

ರಸ್ತೆಯಲ್ಲಿ ಸಂಚರಿಸುತ್ತಿದ್ದ ಸಾರ್ವಜನಿಕರೊಬ್ಬರು ಕಾಡುಕೋಣಗಳ ಓಡಾಟ ವನ್ನು ತಮ್ಮ ಮೊಬೈಲ್‌ನಲ್ಲಿ ವೀಡಿಯೋ ಸೆರೆಹಿಡಿದು, ಸಾಮಾಜಿಕ ಜಾಲತಾಣಗಳಲ್ಲಿ ಹರಿಬಿಟ್ಟಿದ್ದು, ವೀಡಿಯೋ ಎಲ್ಲೆಡೆ ವೈರಲ್ ಆಗುತ್ತಿದೆ.

ಮಲೆನಾಡು ಭಾಗವಾದ ಅರೇಹಳ್ಳಿ ಹಾಗು ಸುತ್ತಮುತ್ತ ಈ ಹಿಂದೆ ಕಾಡಾನೆಗಳ ಹಾವಳಿ ಹೆಚ್ಚಾಗಿದ್ದ ಕಾರಣ, ರೈತರು ಹತ್ತಾರು ವರ್ಷಗಳಿಂದ ಬೆಳೆಸಿ ಪೋಷಿಸಿದ ವಿವಿಧ ಬೆಳೆಗಳನ್ನು ರಕ್ಷಿಸಲು ಸೋಲಾರ್ ವಿದ್ಯುತ್ ತಂತಿ ಬೇಲಿಗಳನ್ನು ಅಳವಡಿಸಿದ್ದರು. ಅದರ ಪರಿಣಾಮ ಕಳೆದ ಕೆಲವು ತಿಂಗಳುಗಳಿಂದ ಕಾಡಾನೆಗಳ ಸಂಖ್ಯೆಯು ತಗ್ಗಿದ್ದರಿಂದ ರೈತರು ತುಸು ನಿಟ್ಟುಸಿರು ಬಿಟ್ಟಿದ್ದರು. ಈ ಮಧ್ಯೆ, ಹಲವು ದಿನಗಳಿಂದ ಕಡೇಗರ್ಜೆ ಮತ್ತು ಸುತ್ತಮುತ್ತಲಿನಲ್ಲಿ ಕಾಡು ಕೋಣಗಳ ಗುಂಪು ಕಾಣಿಸಿ ಕೊಳ್ಳುತ್ತಿರುವುದು ಸ್ಥಳೀಯರನ್ನು ಕಂಗೆಡಿಸಿದೆ. ಸದ್ಯಕ್ಕೆ ಕಾಡು ಕೋಣಗಳಿಂದ ಯಾವುದೇ ಅನಾಹುತ ಸಂಭವಿಸಿಲ್ಲವೆಂಬುದೇ ಸ್ವಲ್ಪ ನಿರಾಳತೆ ತಂದಿದೆ.

ಮುಂದಿನ ದಿನಗಳಲ್ಲಿ ಅಹಿತಕರ ಘಟನೆ ಸಂಭವಿಸುವ ಮೊದಲೇ ಅರಣ್ಯ ಇಲಾಖೆ ಅಧಿಕಾರಿ ಗಳು ಎಚ್ಚೆತ್ತುಕೊಂಡು ಕಾಡುಕೋಣಗಳನ್ನು ಕಾಡಿಗಟ್ಟುವ ಕೆಲಸ ಮಾಡಬೇಕು. ಕಾಡುಕೋಣ ಗಳ ಚಲನವಲನಗಳ ಬಗ್ಗೆ ಅರಣ್ಯ ಇಲಾಖೆ ಆಗಾಗ್ಗೆ ಸಾರ್ವಜನಿಕರಿಗೆ ಮಾಹಿತಿ ನೀಡುವುದು ಸುರಕ್ಷಿತ ಎಂದು ಸ್ಥಳೀಯರು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

# ವಿ.ಮಧುಸೂದನ್‌ಗೆ ಪದೋನ್ನತಿ

• ಪ್ರಜೋದಯ ವರದಿ



**ಹಾಸನ:** ಆಕಾಶವಾಣಿ ಕೇಂದ್ರದಲ್ಲಿ ಪ್ರಸಾರ ನಿರ್ವಾಹಣಾಧಿ ಕಾರಿಯಾಗಿ ಕಾರ್ಯ ನಿರ್ವಹಿಸುತ್ತಿರುವ ಅರಕಲಗೂಡು ವಿ. ಮಧುಸೂದನ್ ಅವರು ಕಾರ್ಯಕ್ರಮ ನಿರ್ವಹಣಾಧಿಕಾರಿಯಾಗಿ ಪದೋನ್ನತಿ ಹೊಂದಿದ್ದಾರೆ.

ಅವರನ್ನು ಹಾಸನ ಆಕಾಶವಾಣಿ ಕೇಂದ್ರದಲ್ಲಿಯೇ ಕಾರ್ಯಕ್ರಮ ನಿರ್ವಹಣಾಧಿಕಾರಿಯಾಗಿ ಮುಂದುವರಿಸಲಾಗಿದೆ. 2011ರಲ್ಲಿ ಕೇಂದ್ರ ಸರ್ಕಾರದ ಸಿಬ್ಬಂದಿ ನೇಮಕಾತಿ ಆಯೋಗದ ಮೂಲಕ ಆಯ್ಕೆಗೊಂಡ ಅವರು, ಚಿತ್ರದುರ್ಗ ಆಕಾಶವಾಣಿ ಕೇಂದ್ರದಲ್ಲಿ ಪ್ರಸಾರ ನಿರ್ವಹಣಾ ಧಿಕಾರಿಯಾಗಿ 10 ವರ್ಷಗಳ ಕಾಲ ಸುದೀರ್ಘ ಹಾಗೂ ಸಾರ್ಥಕ ಸೇವೆ ಸಲ್ಲಿಸಿ, 2021ರಲ್ಲಿ ಹಾಸನ ಆಕಾಶವಾಣಿ ಕೇಂದ್ರಕ್ಕೆ ವರ್ಗಾವಣೆಗೊಂಡು ಸೇವೆ ಸಲ್ಲಿಸುತ್ತಿದ್ದಾರೆ. ಪ್ರಸಾರ ನಿರ್ವಹಣಾಧಿಕಾರಿಯಾಗಿ ಅವರು ನಿರ್ಮಿಸಿದ ನಾಲ್ಕು ಬಾನುಲಿ ರೂಪಕಗಳಿಗೆ ರಾಜ್ಯ ಮಟ್ಟದ ಪ್ರಶಸ್ತಿ ದೊರೆತಿದೆ. ಸದ್ಯ ಆಕಾಶವಾಣಿಯ ಕೃಷಿ, ಆರೋಗ್ಯ ಹಾಗೂ ಇತರೆ ವಿಭಾಗಗಳ ಜವಾಬ್ದಾರಿ ನಿರ್ವಹಿಸುತ್ತಿದ್ದಾರೆ.

**ಜಿಲ್ಲಾ ಶಿಕ್ಷಣ ಇಲಾಖೆ ಉಪ ನಿರ್ದೇಶಕ ಕೆ.ಎನ್.ಬಲರಾಮ ಅಭಿಮತ**

# ಸ್ಪರ್ಧಾತ್ಮಕ ಯುಗದಲ್ಲಿ ಕ್ರೀಡೆಯೂ ಅವಶ್ಯಕ

• ಪ್ರಜೋದಯ ವರದಿ

**ಹಾಸನ:** ಸ್ಪರ್ಧಾತ್ಮಕ ಯುಗದಲ್ಲಿ ವಿದ್ಯಾರ್ಥಿಗಳು ಕೇವಲ ಅಂಕಗಳ ಮೇಲೆ ಕೇಂದ್ರೀಕರಿಸುವು ದನ್ನು ಬಿಟ್ಟು, ವ್ಯಕ್ತಿತ್ವ ವಿಕಾಸಕ್ಕಾಗಿ ಕ್ರೀಡೆ ಯತ್ತಾ ಆಸಕ್ತಿ ಬೆಳೆಸಿಕೊಳ್ಳಬೇಕೆಂದು ಜಿಲ್ಲಾ ಶಿಕ್ಷಣ ಇಲಾಖೆ ಉಪ ನಿರ್ದೇಶಕ ಕೆ.ಎನ್.ಬಲರಾಮ ಅವರು ತಿಳಿಸಿದರು.

ನಗರದ ರಾಜೀವ್ ಪಾಲಿಟೆಕ್ನಿಕ್ ಕಾಲೇಜಿನಲ್ಲಿ ರಾಜೀವ್ ಶಿಕ್ಷಣ ಸಂಸ್ಥೆ ಸಂಸ್ಥಾಪಕ ಅಧ್ಯಕ್ಷ ಡಾ|| ವಿ.ರಾಜೀವ್ ಸ್ಮರಣಾರ್ಥ ಪ್ರೌಢಶಾಲಾ ವಿದ್ಯಾರ್ಥಿಗಳಿಗಾಗಿ ಆಯೋಜಿಸಿದ್ದ ಅಂತರ ಜಿಲ್ಲಾ ಪ್ರೌಢಶಾಲಾ ಮಟ್ಟದ ಕ್ರೀಡಾ ಸ್ಪರ್ಧೆ ರಾಜೀವ್ ಇನ್‌ಸ್ಪೈರ್-2025 ಉದ್ಘಾಟಿಸಿ ಮಾತನಾಡಿದ ಅವರು, ಶಾಲಾ ಶಿಕ್ಷಣದಲ್ಲಿ ಪಾಠ, ಪುಸ್ತಕದ ಜ್ಞಾನ ಮಾತ್ರ ಸಾಕಾಗುವುದಿಲ್ಲ. ಮಕ್ಕಳ ಸಮಗ್ರ ವ್ಯಕ್ತಿತ್ವ ವಿಕಾಸಕ್ಕೆ ಕ್ರೀಡೆಗಳು ಅತ್ಯಂತ ಮಹತ್ವದ ಪಾತ್ರ ವಹಿಸುತ್ತವೆಂದು ಹೇಳಿದರು.

ಕ್ರೀಡೆಗಳು ದೈಹಿಕ ಆರೋಗ್ಯ ಹೆಚ್ಚಿಸುತ್ತವೆ. ಮಾನಸಿಕ ಶಕ್ತಿ ಹಾಗು ಒತ್ತಡ ನಿರ್ವಹಣೆ, ಶಿಸ್ತು, ನಾಯಕತ್ವ, ಹೊಣೆಗಾರಿಕೆ ಕಲಿಸುತ್ತವೆ. ಜಯ, ಪರಾಜಯವನ್ನು ಸಮನಾಗಿ ಸ್ವೀಕರಿ ಸುವ ಮನೋಭಾವ ನೀಡುತ್ತವೆ. ಗೆಲುವು ವಿದ್ಯಾರ್ಥಿಗಳಿಗೆ ಆತ್ಮ



ವಿಶ್ವಾಸ ನೀಡಿದರೆ, ಸೋಲು ಪುನಃ ಪ್ರಯತ್ನಿಸುವ ಮನೋಬಲ ಬೆಳೆಸುತ್ತದೆ. ಆದ್ದ ರಿಂದ ಕ್ರೀಡೆಗಳು ಕೇವಲ ಆಟವಲ್ಲ. ಅದು ಜೀವನ ಪಾಠ ಕಲಿಸುವ ಒಂದು ಮಹಾಪಾಠ ಶಾಲೆ ಎಂದರು.

ರಾಜೀವ್ ಶಿಕ್ಷಣ ಸಂಸ್ಥೆ ಕಾರ್ಯದರ್ಶಿ ಡಾ.ಬಿ.ಎನ್.ರತ್ನ ಅವರು ಮಾತನಾಡಿ, ಕ್ರೀಡೆ ಒಬ್ಬರನ್ನೊಬ್ಬರು ಪ್ರೋತ್ಸಾಹಿಸುವುದು. ಸೋಲಿನಲ್ಲೂ ನಿಲ್ಲುವ ಧೈರ್ಯ, ಗೆಲುವಿನಲ್ಲಿ ವಿನಯ. ಈ ಗುಣಗಳು ವಿದ್ಯಾರ್ಥಿಗಳಿಗೆ ಅವರ ಭವಿಷ್ಯದ ಬದುಕಿನಲ್ಲಿ ಶಿಕ್ಷಣ, ಉದ್ಯೋಗ, ಜೀವನ ನಿರ್ವಹಣೆಯಲ್ಲಿ ಅತ್ಯಗತ್ಯ. ಅವೆಲ್ಲವನ್ನೂ ಕಲಿಸುವ ಶಿಕ್ಷಕ ಕ್ರೀಡೆ ಎಂದು ಸ್ಫೂರ್ತಿ ದಾಯಕ ಮಾತುಗಳನ್ನು ಹೇಳಿದರು.

ಪ್ರಾಂಶುಪಾಲ ಡಾ.ಎಂ.ಆರ್. ಶಂಕರೇಗೌಡ ಅವರು ಮಾತನಾಡಿ, ಪ್ರೌಢಶಾಲೆ ಹಂತದ ಮಕ್ಕಳ ವ್ಯಕ್ತಿತ್ವ ರೂಪುಗೊಳ್ಳುವ ಅತ್ಯಂತ ಸೂಕ್ಷ್ಮ ಮತ್ತು ಮಹತ್ವದ ಹಂತ. ಕ್ರೀಡಾ ಕೂಟ ವಿದ್ಯಾರ್ಥಿಗಳಲ್ಲಿ ಆರೋಗ್ಯಕರ ಜೀವನ ಶೈಲಿ ಬೆಳೆಸುವಲ್ಲಿ ಮಹತ್ವದ ಪಾತ್ರ ವಹಿಸುತ್ತವೆ. ಇಂದಿನ ಮಕ್ಕಳ ಜೀವನದಲ್ಲಿ ಮೊಬೈಲ್, ಟಿವಿ, ವೀಡಿಯೋ ಗೇಮ್‌ಗಳ ಮತ್ತು ಸಾಮಾಜಿಕ ಜಾಲತಾಣ ಪ್ರಭಾವ ಹೆಚ್ಚಿರುವ ಕಾಲದಲ್ಲಿ ಮೈದಾನಕ್ಕೆ ಬರುವ ಅಭ್ಯಾಸ ಬೆಳೆಸುವುದು ಅಗತ್ಯ ಎಂದು ಹೇಳಿದರು.

ರಾಜೀವ್ ನರ್ಸಿಂಗ್ ಕಾಲೇಜಿನ ಪ್ರಾಚಾರ್ಯೆ ಸಲೋಮಿ, ರತ್ನ ನರ್ಸಿಂಗ್ ಕಾಲೇಜಿನ ಪ್ರಾಂಶುಪಾಲ ಡಾ.ಎಂ.ಸೆಲ್ವಿ, ಕಾಲೇಜಿನ ವಿದ್ಯಾರ್ಥಿ ಕ್ಷೇಮಾಭಿವೃದ್ಧಿ ಅಧಿಕಾರಿ ಗಂಗರಾಜು, ಎಲೆಕ್ಟ್ರಾನಿಕ್ಸ್ ಆ್ಯಂಡ್ ಕಮ್ಯುನಿಕೇಶನ್ ವಿಭಾಗದ ಮುಖ್ಯಸ್ಥರಾದ ಚೈತ್ರ, ದೈಹಿಕ ಶಿಕ್ಷಣ ನಿರ್ದೇಶಕ ಉಮೇಶ್, ಗಣೇಶ್ ಇದ್ದರು.


### 32 ಪ್ರೌಢಶಾಲೆಗಳ ತಂಡಗಳು ಭಾಗಿ

ಜಿಲ್ಲೆಯ ಹಾಗು ಅಂತರ ಜಿಲ್ಲೆಯ ವಿವಿಧ ಭಾಗಗಳಿಂದ 32 ಪ್ರೌಢಶಾಲಾ ತಂಡಗಳು ಕ್ರೀಡಾ ಕೂಟದಲ್ಲಿ ಭಾಗವಹಿಸಿದ್ದವು. ಬಾಲಕರ ವಾಲಿ ಬಾಲ್ ಪಂದ್ಯಾವಳಿಯಲ್ಲಿ 4ನೇ ಸ್ಥಾನ ಸರ್ಕಾರಿ ಜೂನಿಯರ್ ಕಾಲೇಜು ಶ್ರವಣ ಬೆಳಗೊಳ, ತೃತೀಯ ಸ್ಥಾನ ವಾಸವಿ ವಿದ್ಯಾಸಂಸ್ಥೆ, ಹೊಳೆ ನರಸೀಪುರ, ದ್ವಿತೀಯ ಸ್ಥಾನ ಕ್ರಿಸ್ತಜ್ಯೋತಿ ಶಾಲೆ ಅರಕಲಗೂಡು, ಪ್ರಥಮ ಸ್ಥಾನ ಮಂಗಳೂರು ಪಬ್ಲಿಕ್ ಶಾಲೆ ಹಾಸನ ತಂಡಗಳು ಪಡೆದುಕೊಂಡವು. ಬಾಲಕಿಯರ ಥ್ರೋಬಾಲ್ ಪಂದ್ಯಾವಳಿಯಲ್ಲಿ 4ನೇ ಸ್ಥಾನ ಸರ್ಕಾರಿ ಪ್ರೌಢಶಾಲೆ, ಕಟ್ಟಾಯ, ತೃತೀಯ ಸ್ಥಾನ ಶ್ರೀ ಭುವನೇಶ್ವರಿ ವಿದ್ಯಾಸಂಸ್ಥೆ ದುದ್ದ ಆರ್.ಎಸ್., ದ್ವಿತೀಯ ಸ್ಥಾನ ಕ್ರೈಸ್ಟ್ ಶಾಲೆ ಹಾಸನ, ಪ್ರಥಮ ಸ್ಥಾನ ಶ್ರೀ ಆದರ್ಶ ಗ್ರಾಮೀಣ ಪ್ರೌಢಶಾಲೆ, ತಟ್ಟೆಕೆರೆ ಹೊಳೆನರಸೀಪುರ ತಂಡಗಳು ಪಡೆದುಕೊಂಡವು, ವಿಜೇತ ಮತ್ತು ರನ್ನರ್ ಅಪ್ ತಂಡಗಳಿಗೆ ನಗದು ಬಹುಮಾನ, ಆಕರ್ಷಕ ಟ್ರೋಫಿ, ಪದಕ, ಪ್ರಮಾಣಪತ್ರ ವಿತರಿಸಲಾಯಿತು.

C M Y K C M Y K C M Y K C M Y K

# ಭಾವ ಲಹರಿ

## ಸೆಲ್ಸಿಯಸ್ ಎಂಬ ಹೆಸರು ಹೇಗೆ ಬಂತು?



**» ನಮ್ಮ ಮಕ್ಕಳಿಗೆ ನಾವು ದಿನನಿತ್ಯ ಬಳಸುವ ಮೊಬೈಲಿನಂತಹ ಹತ್ತು ಹಲವು ವೈಜ್ಞಾನಿಕ ಉಪಕರಣಗಳ ಬಗ್ಗೆ ತಿಳಿಸಿಕೊಡುವುದಷ್ಟೇ ಅಲ್ಲ ಅದರ ಸಂಶೋಧನೆಯ ಹಿಂದಿರುವ ಸಾಧಕರ ಜೀವನಗಾಥೆಗಳನ್ನು ಹೇಳಬೇಕು. ಅವರ ಪರಿಶ್ರಮದ ಬಗ್ಗೆ ತಿಳಿಸಿ ಕೊಡಬೇಕು. ಇದರಿಂದ ಪ್ರೇರಣೆಗೊಂಡು ಆ ಮಗು ಮುಂದೊಂದು ದಿನ ವಿಜ್ಞಾನಿಯಾಗಬಹುದು.**

ನಮಗಿಂದು ಟಿ.ವಿ, ಮೊಬೈಲ್, ವಾಷಿಂಗ್ ಮಷಿನ್, ಎಸಿ, ಕಾರು, ವಿಮಾನ ಅಷ್ಟೇ ಅಲ್ಲ ರಾಕೆಟ್, ಮಿಸ್ಸೈಲ್.... ಮುಂತಾದ ಸಂಗತಿಗಳ ಬಗ್ಗೆ ಗೊತ್ತು. ಆದರೆ, ಅವುಗಳನ್ನು ಸಂಶೋಧಿಸಲು ತಮ್ಮ ಇಡೀ ಜೀವಿತಾವಧಿಯನ್ನು ಅಧ್ಯಯನ, ಅಧ್ಯಾಪನಗಳಿಗಾಗೇ ಮುಡಿಪಾಗಿಟ್ಟ ವಿಜ್ಞಾನಿಗಳ ಬಗ್ಗೆ ಕೇಳಿದರೆ ನಮಗೆ ಗೊತ್ತಿಲ್ಲ. ಟಿ ವಿ ಗೊತ್ತು; ಆದರೆ, ಅದರ ಸಂಶೋಧಕ ಯಾರೆಂದು ಕೇಳಿದರೆ ತಡವರಿಸುತ್ತೇವೆ. ಅದು ಹೋಗಲಿ, ನಮಗಿಂದು ಚಿರಪರಿಚಿತವಾಗಿರುವ ಮೊಬೈಲ್ ಗೊತ್ತು, ಅದರ ಬಳಕೆಯೂ ಗೊತ್ತು. ಆದರೆ, ಅದರ ಸಂಶೋಧಕ ಯಾರೆಂದು ಕೇಳಿದರೆ ಉತ್ತರ ಹುಡುಕಲು ಅದೇ ಮೊಬೈಲಿನಲ್ಲಿ ಗೂಗಲಿಸುತ್ತೇವೆ.

ನಮ್ಮ ಮಕ್ಕಳಿಗೆ ನಾವು ದಿನನಿತ್ಯ ಬಳಸುವ ಮೊಬೈಲಿನಂತಹ ಹತ್ತು ಹಲವು ವೈಜ್ಞಾನಿಕ ಉಪಕರಣಗಳ ಬಗ್ಗೆ ತಿಳಿಸಿಕೊಡುವುದಷ್ಟೇ ಅಲ್ಲ ಅದರ ಸಂಶೋಧನೆಯ ಹಿಂದಿರುವ ಸಾಧಕರ ಜೀವನಗಾಥೆಗಳನ್ನು ಹೇಳಬೇಕು. ಅವರ ಪರಿಶ್ರಮದ ಬಗ್ಗೆ ತಿಳಿಸಿಕೊಡಬೇಕು. ಇದರಿಂದ ಪ್ರೇರಣೆ ಗೊಂಡು ಆ ಮಗು ಮುಂದೊಂದು ದಿನ ವಿಜ್ಞಾನಿಯಾಗಬಹುದು.

ಅದು ಬಿಟ್ಟು ನಾವಿಂದು ಕೇವಲ ಮನರಂಜನಾ ಕ್ಷೇತ್ರದ ಸಾಧಕರನ್ನೇ ತಲೆಯ ಮೇಲೆ ಹೊತ್ತು ತಿರುಗುತ್ತಿದ್ದೇವೆ. ಏನೂ ಅರಿಯದ ಆ ಕಂದಮ್ಮಗಳು ತನ್ನ ನೆಚ್ಚಿನ ಮನರಂಜನಾ ನಾಯಕನ ಸಿಗರೇಟು ಸೇದುವ, ಮದ್ಯಪಾನ ಮಾಡುವ, ಫೈಟ್ ಮಾಡುವ ಮುಂತಾದ ಅವಗುಣಗಳನ್ನೇ ಅನುಕರಣೆ ಮಾಡಿ ಮುಂದೊಂದು ದಿನ ಕುಟುಂಬಕ್ಕೆ, ಸಮಾಜಕ್ಕೆ ಕಂಟಕಪ್ರಾಯ ವ್ಯಕ್ತಿಯಾಗಿ ಬೆಳೆಯುತ್ತದೆ.

ಈ ಕುರಿತು ಪಾಲಕರು, ಶಿಕ್ಷಕರು ಹಾಗೂ ಸಮಾಜದ ಪ್ರತಿಯೊಬ್ಬ ಪ್ರಜ್ಞಾವಂತನೂ ಯೋಚಿಸ ಬೇಕಾದ ತುರ್ತು ಬಂದೊದಗಿದೆ. ಏಳನೇ ತರಗತಿ ಮಕ್ಕಳಿಗೆ ಅಂದು ಶಿಕ್ಷಕರು ಉಷ್ಣ, ತಾಪಮಾಪಕಗಳ ಬಗ್ಗೆ ಪಾಠ ಮಾಡುತ್ತಿದ್ದರು. ಘರ್ಷಣೆಯಿಂದ ಶಾಖ ಉತ್ಪತ್ತಿಯಾಗುತ್ತದೆ. ಆದರೆ, ಅದರ ಮಟ್ಟ ಎಷ್ಟಿರುತ್ತದೆ? ಎಂದು ತಿಳಿಸಿಕೊಡುವುದೇ ತಾಪಮಾಪಕಗಳ ಕೆಲಸ. ಅದಕ್ಕಾಗಿ ಶಿಕ್ಷಕರು ಸಾಮಾನ್ಯವಾಗಿ ಬಳಸುವ ಸೆಲ್ಸಿಯಸ್ ತಾಪಮಾಪಕವನ್ನು (ಉಷ್ಣತಾಮಾಪಕ) ಮಕ್ಕಳಿಗೆ ತೋರಿಸುತ್ತಾ; ಗಾಜಿನ ಈ ಬಿರಡೆಯ ಮೇಲೆ ಸಂಖ್ಯೆಗಳ ಮಾರ್ಕ್ ಮಾಡಲಾಗಿರುತ್ತದೆ.

ಒಳಗಡೆ ಇರುವ ಗಾಜಿನ ಚಿಕ್ಕದಾದ ನಾಳದ ಕೆಳಗಡೆ ಸಿಲ್ವರ್ ಬಣ್ಣದಂತೆ ಕಾಣುವ ಪಾದರಸವನ್ನು ತುಂಬಲಾಗಿರುತ್ತದೆ. ಉಷ್ಣತೆ ಹೆಚ್ಚಾದಂತೆ ನಳಿಕೆಯಲ್ಲಿ ಪಾದರಸ ಮೇಲಕ್ಕೇರುತ್ತದೆ. ಇದರಿಂದ ನಾವು ನಮ್ಮ ಸುತ್ತಲಿನ ತಾಪ ಎಷ್ಟು ಎಂಬುದನ್ನು ತಿಳಿಯಬಹುದು. ಇದನ್ನು ಸೆಲ್ಸಿಯಸ್ ಅಥವಾ ಡಿಗ್ರಿ ಸೆಲ್ಸಿಯಸ್‌ನಲ್ಲಿ ಹೇಳಲಾಗುತ್ತದೆ ಎಂದು ಹೇಳುತ್ತಿದ್ದಂತೆ ತರಗತಿಯ ಹಿಂದಿನ ಬೆಂಚಿನಲ್ಲಿ ಕುಳಿತಿದ್ದ ತುಂಟ ರಾಜು-ಸರ್, ಈ ಸೆಲ್ಸಿಯಸ್ ಎಂಬ ಪದ ಇದಕ್ಕೇಕೆ ಬಂತು? ಎಂದು ಕೇಳಿದ.

ಆಗ ಶಿಕ್ಷಕರು, ನೋಡು ರಾಜು; ಬಹುಪಾಲು ವೈಜ್ಞಾನಿಕ ಉಪಕರಣಗಳಲ್ಲಿ ಅಲ್ಲಿನ ಪರಿಮಾಣಗಳ ಮಾನಗಳನ್ನು ಕಂಡುಹಿಡಿದ ವಿಜ್ಞಾನಿಗಳ ಹೆಸರನ್ನು, ಅವರ ಆ ಸಂಶೋಧನೆಯ ದ್ಯೋತಕವಾಗಿ ಅವರನ್ನು ಗೌರವಿಸಲು ಇಡಲಾಗುತ್ತದೆ. ಇಲ್ಲಿಯೂ ತಾಪಮಾಪಕದಲ್ಲಿ ಸೆಲ್ಸಿಯಸ್ ಎಂಬುದು ಖ್ಯಾತ ವಿಜ್ಞಾನಿ ಆಂಡರ್ಸ್ ಸೆಲ್ಸಿಯಸ್ ಅವರ ಹೆಸರೇ ಆಗಿದೆ ಎಂದು ಹೇಳಿದರು.

ಆಗ ಮತ್ತೊಬ್ಬ ವಿದ್ಯಾರ್ಥಿನಿ ವರ್ಷಾ,ಸರ್, ಹಾಗಾದರೆ ನೀವು ವಿಜ್ಞಾನಿ ಸೆಲ್ಸಿಯಸ್‌ನ ಬಗ್ಗೆ ತಿಳಿಸಿ ಕೊಡುವಿರಾ ಎಂದಳು. ಅದಕ್ಕೆ ಶಿಕ್ಷಕರು ಸೆಲ್ಸಿಯಸ್ ಬಗ್ಗೆ ದೀರ್ಘ ವಿವರಣೆ ನೀಡಿದರು. ವಿಜ್ಞಾನಿಗಳೆಂದರೇ ಹಾಗೆ. ಅವರು ತಮ್ಮ ಅಂತರದೃಷ್ಟಿ, ಕ್ರಿಯಾಶೀಲತೆ, ಏಕಾಗ್ರತೆ ಮುಂತಾದ ಕೌಶಲಗಳ ಮೂಲಕ ಮನುಕುಲಕ್ಕೆ ಒಳಿತಾಗುವುದನ್ನು ಸಂಶೋಧಿಸುತ್ತಾರೆ.

ಅಂತಹ ಮಹಾನ್ ವ್ಯಕ್ತಿಗಳ ಸಾಲಿಗೆ ಈ ನಮ್ಮ ಆಂಡರ್ಸ್ ಸೆಲ್ಸಿಯಸ್ ಸೇರುತ್ತಾನೆ. ಖಗೋಳ ಶಾಸ್ತ್ರ ಪ್ರಾಧ್ಯಾಪಕ ನಿಲ್ ಸೆಲ್ಸಿಯಸ್ ಅವರ ಮಗನಾಗಿ, ಸಸ್ಯಶಾಸ್ತ್ರಜ್ಞ ಓಲೋಫ್ ಸೆಲ್ಸಿಯಸ್ ಅವರ ಸೋದರಳಿಯ ಮತ್ತು ಗಣಿತಜ್ಞ ಮ್ಯಾಗ್ನಸ್ ಸೆಲ್ಸಿಯಸ್ ಮತ್ತು ಖಗೋಳಶಾಸ್ತ್ರಜ್ಞ ಆಂಡರ್ಸ್ ಸ್ಪೋಲ್ ಅವರ ಮೊಮ್ಮಗನಾಗಿ ಈ ನಮ್ಮ ಆಂಡರ್ಸ್ ಸೆಲ್ಸಿಯಸ್ ಸ್ವಿಡನ್ನಿನ ಉಪ್ಸಲಾದಲ್ಲಿ 27ನೇ ನವೆಂಬರ್ 1704ರಲ್ಲಿ ಜನಿಸುತ್ತಾನೆ.

ಸೆಲ್ಸಿಯಸ್‌ನ ಕುಟುಂಬವು ಹಾಲ್ಸಿಂಗ್‌ಲ್ಯಾಂಡ್ ಪ್ರಾಂತ್ಯದ ಓವನಾಕರ್‌ನಿಂದ ಬಂದದ್ದು. ಅವನ ಕುಟುಂಬ ವಾಸವಾಗಿರುತ್ತಿದ್ದ ಎಸ್ಟೇಟ್ ಡೋಮಾದಲ್ಲಿತ್ತು. ಇದನ್ನು ಹೋಜೆನ್ ಅಥವಾ ಹೋಗೆನ್ ಎಂದೂ ಕರೆಯುತ್ತಾರೆ. ಸೆಲ್ಸಿಯಸ್ ಎಂಬ ಹೆಸರು ಎಸ್ಟೇಟ್ ಹೆಸರಿನ ಲ್ಯಾಟಿನ್ ರೂಪಾಂತರವಾಗಿದೆ. ಲ್ಯಾಟಿನ್ ಭಾಷೆಯಲ್ಲಿ ಸೆಲ್ಸಸ್ ಪದದ ಅರ್ಥ ದಿಬ್ಬ ಎಂದಾಗುತ್ತದೆ ಎಂದು ಶಿಕ್ಷಕರು ತಿಳಿಸಿದರು.

ಬೆಳೆಯುವ ಸಿರಿ ಮೊಳಕೆಯಲ್ಲಿ ಕಾಣು ಎನ್ನುವಂತೆ ಸೆಲ್ಸಿಯಸ್ ಚಿಕ್ಕವಯಸ್ಸಿನಿಂದಲೂ ಗಣಿತದಲ್ಲಿ ಚತುರನಾಗಿದ್ದನು. ಹೀಗಾಗಿ ಶಾಲೆ, ಮನೆಗಳಲ್ಲಿ ಶಿಕ್ಷಕರಿಗೆ, ಪಾಲಕರಿಗೆ ಅಚ್ಚುಮೆಚ್ಚಾಗಿದ್ದ. ಮುಂದೆ ಆಂಡರ್ಸ್ ಸೆಲ್ಸಿಯಸ್ ಉಪ್ಸಲಾ ವಿಶ್ವವಿದ್ಯಾಲಯದಲ್ಲಿ ಅಧ್ಯಯನ ಮಾಡುತ್ತಾನೆ, ಅಲ್ಲಿ ಅವನ ತಂದೆ ಶಿಕ್ಷಕರಾಗಿದ್ದರು.

1730ರಲ್ಲಿ ಸೆಲ್ಸಿಯಸ್ ಅಲ್ಲಿ ಖಗೋಳಶಾಸ್ತ್ರದ ಪ್ರಾಧ್ಯಾಪಕನಾಗಿ ಸೇರಿಕೊಳ್ಳುತ್ತಾನೆ. ವಿಶೇಷವೆಂದರೆ ಪ್ರಸಿದ್ಧ ಸ್ವೀಡಿಷ್ ನಾಟಕಕಾರ, ಕವಿ ಮತ್ತು ನಟ ಜೋಹಾನ್ ಸೆಲ್ಸಿಯಸ್ ಕೂಡ ಸೆಲ್ಸಿಯಸ್‌ನ ಚಿಕ್ಕಪ್ಪನಾಗಿದ್ದ. ಇವರ ಇಡೀ ಕುಟುಂಬದ ಸದಸ್ಯರೆ ಒಂದಿಂದು ಕ್ಷೇತ್ರದಲ್ಲಿ ಸಾಧಕರೇ ಆಗಿದ್ದುದರಿಂದ ಆಂಡರ್ಸ್ ಸೆಲ್ಸಿಯಸ್ ಕೂಡ ಗಣಿತ ಹಾಗೂ ಖಗೋಳಶಾಸ್ತ್ರದಲ್ಲಿ ಅಪಾರ ಪಾಂಡಿತ್ಯ ಪಡೆದಿದ್ದ.

ಖಗೋಳಶಾಸ್ತ್ರದಲ್ಲಿ ಅಪಾರ ಆಸಕ್ತಿಯಿದ್ದ ಸೆಲ್ಸಿಯಸ್ 1730ರಲ್ಲಿ, ನೋವಾ ಮೆಥಡಸ್ ಡಿಸ್ಟೆಂಟಿಯಮ್ ಸೋಲಿಸ್ ಎ ಟೆರ್ರಾ ಡಿಟರ್ಮಿನಾಂಡಿ (ಭೂಮಿಯಿಂದ ಸೂರ್ಯನಿಗೆ ಇರುವ ಅಂತರವನ್ನು ನಿರ್ಧರಿಸುವ ಹೊಸ ವಿಧಾನ) ವನ್ನು ಪ್ರಕಟಿಸುತ್ತಾನೆ. ಅವನ ಈ ಸಂಶೋಧನೆಯು ಅರೋರಾ ವಿದ್ಯಮಾನಗಳ ಅಧ್ಯಯನವನ್ನು ಸಹ ಒಳಗೊಂಡಿತ್ತಂತೆ. ಈ ಹೊಸ ವಿಧಾನವನ್ನು ಅವನು ತನ್ನ ಸಹಾಯಕ ಓಲೋ-ಹಿಯೋಟರ್‌ನೊಂದಿಗೆ ನಡೆಸುತ್ತಾನೆ.

ಅರೋರಾ ಬೋರಿಯಾಲಿಸ್ ಮತ್ತು ಭೂಮಿಯ ಕಾಂತಕ್ಷೇತ್ರದಲ್ಲಿನ ಬದಲಾವಣೆಗಳ ನಡುವಿನ ಸಂಪರ್ಕವನ್ನು ಸೂಚಿಸಿದ ಮೊದಲ ವ್ಯಕ್ತಿ ಎಂಬ ಖ್ಯಾತಿ ಸೆಲ್ಸಿಯಸ್‌ನದಾಗುತ್ತದೆ. 1733ರಲ್ಲಿ ನ್ಯೂರೆಂಬರ್ಗ್‌ನಲ್ಲಿ, ತಾನು ಸ್ವತಃ ಮತ್ತು ಇತರರು ಮಾಡಿದ ಅರೋರಾ ಬೋರಿಯಾಲಿಸ್‌ನ 316 ಅವಲೋಕನಗಳ ಸಂಗ್ರಹವನ್ನು ಪ್ರಕಟಿಸುತ್ತಾನೆ. ಇದು ಪ್ರಾಜ್ಞರ ಮನಗೆಲ್ಲುತ್ತದೆ.

1730ರ ದಶಕದ ಆರಂಭದಲ್ಲಿ ಸೆಲ್ಸಿಯಸ್ ಆಗಾಗ್ಗೆ ಪ್ರಯಾಣಿಸುತ್ತಿದ್ದನು. ಜರ್ಮನಿ, ಇಟಲಿ ಮತ್ತು ಫ್ರಾನ್ಸ್ ಸೇರಿದಂತೆ, ಅವನು ಬಹುಪಾಲು ಯುರೋಪಿನ ವೀಕ್ಷಣಾಲಯಗಳಿಗೆ ಭೇಟಿ ನೀಡುತ್ತಾನೆ. ಪ್ಯಾರಿಸ್‌ನ ಲ್ಯಾಪ್ ಲ್ಯಾಂಡ್‌ನಲ್ಲಿ ಮೆರಿಡಿಯನ್ ಚಾಪದ ಅಳತೆಯನ್ನು ಪ್ರತಿಪಾದಿಸುತ್ತಾನೆ. 1736ರಲ್ಲಿ, ಫ್ರೆಂಚ್ ಗಣಿತಜ್ಞ ಪಿಯರೆ ಲೂಯಿಸ್ ಮೌಪರ್ಟುಯಿಸ್ (1698-1759) ನೇತೃತ್ವದಲ್ಲಿ ಫ್ರೆಂಚ್ ಅಕಾಡೆಮಿ ಆಫ್ ಸೈನ್ಸಸ್ ಆ ಉದ್ದೇಶಕ್ಕಾಗಿ ಆಯೋಜಿಸಿದ್ದ ಅಧ್ಯಯನ ಪ್ರವಾಸದಲ್ಲಿ ಪಾಲ್ಗೊಳ್ಳುತ್ತಾನೆ.

ಇದನ್ನು ಧ್ರುವದ ಹತ್ತಿರ ಮೆರಿಡಿಯನ್ ಉದ್ದಕ್ಕೂ ಒಂದು ಡಿಗ್ರಿಯ ಉದ್ದವನ್ನು ಅಳೆಯುವುದು ಉದ್ದೇಶವಾಗಿತ್ತು. ಭೂಮಿಯ ಆಕಾರವು ಧ್ರುವಗಳಲ್ಲಿ ಚಪ್ಪಟೆಯಾದ ದೀರ್ಘವೃತ್ತಾಕಾರದಲ್ಲಿದೆ ಎಂಬ ಐಸಾಕ್ ನ್ಯೂಟನ್ ಅವರ ನಂಬಿಕೆಯನ್ನು ಸೆಲ್ಸಿಯಸ್‌ರ ಅಧ್ಯಯನ ಪ್ರವಾಸಗಳು ದೃಢಪಡಿಸಿದವು.

ನಿರಂತರ ಖಗೋಳಶಾಸ್ತ್ರದ ಅಧ್ಯಯನದ ಫಲವಾಗಿ ತಾನು ಇದುವರೆಗೂ ವಿದೇಶಗಳಿಂದ ತಂದಿದ್ದ ಹಲವಾರು ವೈಜ್ಞಾನಿಕ ಉಪಕರಣಗಳನ್ನು ಒಟ್ಟಿಗೆ ಒಂದೆಡೆ ಜೋಡಿಸಿ ಇಡುವ ಉದ್ದೇಶ ಹೊಂದಿರುತ್ತಾನೆ. ಇದಕ್ಕಾಗಿ ಸೆಲ್ಸಿಯಸ್, 1741ರಲ್ಲಿ ಉಪ್ಸಲಾ ಖಗೋಳ ವೀಕ್ಷಣಾಲಯವನ್ನು ಸ್ಥಾಪಿಸುತ್ತಾನೆ.


ಇದು ಖಗೋಳಶಾಸ್ತ್ರದಲ್ಲಿ ಆಸಕ್ತಿ ಉಳ್ಳವರಿಗೆ ಸಹಾಯವಾಗುತ್ತದೆ. ಸುಮ್ಮನಿರದ ಸೆಲ್ಸಿಯಸ್, ಗ್ರಹಣಗಳು ಹಾಗೂ ವಿವಿಧ ಖಗೋಳ ವಸ್ತುಗಳ ವೀಕ್ಷಣೆಗಳನ್ನು ಮಾಡುತ್ತಾನೆ. ತನ್ನದೇ ಆದ ಫೋಟೊಮೆಟ್ರಿಕ್ ವ್ಯವಸ್ಥೆಯನ್ನು ಬಳಸಿಕೊಂಡು ಸುಮಾರು 300 ನಕ್ಷತ್ರಗಳಿಗೆ ಎಚ್ಚರಿಕೆಯಿಂದ ನಿರ್ಧರಿಸಿದ ಪರಿಮಾಣಗಳ ಕ್ಯಾಟಲಾಗ್‌ಗಳನ್ನು ಪ್ರಕಟಿಸುತ್ತಾನೆ.

1742ರಲ್ಲಿ ಸೆಲ್ಸಿಯಸ್ 1710ರಲ್ಲಿ ಸ್ಥಾಪನೆಯಾದ ಅತ್ಯಂತ ಹಳೆಯ, ಉಪ್ಸಲಾದಲ್ಲಿರುವ ರಾಯಲ್ ಸೊಸೈಟಿ ಆಫ್ ಸೈನ್ಸಸ್‌ಗೆ ಒಂದು ಪ್ರಬಂಧದಲ್ಲಿ ಸೆಲ್ಸಿಯಸ್ ತಾಪಮಾಪಕವನ್ನು ಪ್ರಸ್ತಾಪಿಸುತ್ತಾನೆ. ಅವನ ಥರ್ಮಾಮೀಟರ್ ಅನ್ನು ನೀರಿನ ಕುದಿಯುವ ಬಿಂದುವಿಗೆ 0 ಮತ್ತು ಘನೀಕರಿಸುವ ಬಿಂದುವಿಗೆ 100 ಮೌಲ್ಯದೊಂದಿಗೆ ಮಾಪನಾಂಕ ಮಾಡಲಾಗಿರುತ್ತದೆ.

1745ರಲ್ಲಿ, ಸೆಲ್ಸಿಯಸ್ ಮರಣದ ಒಂದು ವರ್ಷದ ನಂತರ, ಹೆಚ್ಚು ಪ್ರಾಯೋಗಿಕ ಅಳತೆಯನ್ನು ಸುಲಭಗೊಳಿಸಲು ಕಾರ್ಲ್ ಲಿನ್ನಿಯಸ್‌ನು ಈ ಸೆಲ್ಸಿಯಸ್ ಮಾಪಕವನ್ನು ಹಿಮ್ಮುಖಗೊಳಿಸುತ್ತಾನೆ. 1725ರಲ್ಲಿ ಸೆಲ್ಸಿಯಸ್, ಉಪ್ಸಲಾದಲ್ಲಿ ರಾಯಲ್ ಸೊಸೈಟಿ ಆಫ್ ಸೈನ್ಸಸ್‌ನ ಕಾರ್ಯದರ್ಶಿಯಾಗಿದ್ದನು.

1744ರಲ್ಲಿ ಕ್ಷಯರೋಗದಿಂದ ನರಳಿ ತನ್ನ ಕೊನೆಯ ಉಸಿರು ಇರುವವರೆಗೂ ಅದೇ ಹುದ್ದೆಯಲ್ಲಿ ಸೇವೆ ಸಲ್ಲಿಸುತ್ತಾನೆ. ಇಂತಹ ಮೇಧಾವಿ ಕೇವಲ ನಾಲ್ಕು ದಶಕಗಳ ಕಾಲ ಬದುಕಿ ವಿಜ್ಞಾನ ಕ್ಷೇತ್ರಕ್ಕೆ ತನ್ನದೇ ಆದ ಕೊಡುಗೆ ಕೊಟ್ಟು 27ನೇ ಏಪ್ರಿಲ್ 1744ರಲ್ಲಿ ಕಾಲನ ಕರೆಗೆ ಓಗೊಡುತ್ತಾನೆ.

**- ಎಲ್.ಪಿ.ಕುಲಕರ್ಣಿ,**
ಬಾದಾಮಿ



## ಕನ್ನಡ ಕವನಗಳು

### ಬದುಕಿನ ತ್ರಾಣ...

ಬದುಕಿನಲ್ಲಿ ತ್ರಾಣವಿದ್ದರೂ ಬತ್ತಿದ್ದ ಮೌನಿಗರ ಕಾಲು ಹಿಡಿದು ಬೇಡುತ್ತೇವೆ
ಚೇತನದಲ್ಲಿ ಬಲವಿದ್ದರೂ ಹೊತ್ತಿದ್ದ ಮಣ್ಣಿಗರ ಕಾಲು ಹಿಡಿದು ಬೇಡುತ್ತೇವೆ
ಅಪಾಯದೊಳಗೆ ಉಪಾಯ ವಿದ್ದರೂ ಉಳ್ಳವರ ಕಾಲು ಹಿಡಿದು ಬೇಡುತ್ತೇವೆ
ವಂತಿಗೆಯಲ್ಲಿ ಕಷ್ಟವಿದ್ದರೂ ಕಂತಿದ್ದ ಮುಖದವರ ಕಾಲು ಹಿಡಿದು ಬೇಡುತ್ತೇವೆ
ನಿತ್ರಾಣದಲ್ಲಿ ಗೊಂದಲವಿದ್ದರೂ ಕಾಡಿದ್ದ ಯವನಿಗರ ಕಾಲು ಹಿಡಿದು ಬೇಡುತ್ತೇವೆ
ನಿರ್ಬಲದಲ್ಲಿ ಸಫಲತೆಯಿದ್ದರೂ ಹಾಡಿದ್ದ ಜವನಿಗರ ಕಾಲು ಹಿಡಿದು ಬೇಡುತ್ತೇವೆ
ಚಿಂತೆಯಲ್ಲಿ ಚೆಲುವಿದ್ದರೂ ಸಾಗಿರುವ ಜೋಡಿಗರ ಕಾಲು ಹಿಡಿದು ಬೇಡುತ್ತೇವೆ
ಚಿಂತನೆಯಲ್ಲಿ ಪ್ರಕಾಶವಿದ್ದರೂ ತಂಪಿದ್ದ ಜೊತೆಯವರ ಕಾಲು ಹಿಡಿದು ಬೇಡುತ್ತೇವೆ
ಹೊಂಬೆಳಕಲ್ಲಿ ಈಶನಿದ್ದರೂ ಗತ್ತಲಿರುವ ಪಯಣಿಗರ ಕಾಲು ಹಿಡಿದು ಬೇಡುತ್ತೇವೆ
ಒಲುಮೆಯಲ್ಲಿ ಪ್ರಣಯವಿದ್ದರೂ ನಿಂತಿದ್ದ ಚೆಲುವೆಯರ ಕಾಲು ಹಿಡಿದು ಬೇಡುತ್ತೇವೆ

**- ಹಾ ಮ ಸತೀಶ** ಬೆಂಗಳೂರು



### ಒಂದು ಹಿಡಿ ಸಂಕಟ..



ಏಸು ಋತುಗಳಲಿ
ಅರಳಿ ಬಂದಿದೆ ಒಂದು ಹಿಡಿ
ಸಂಕಟ..
ಎದೆಯ ಕಿಟಕಿಯ ಹಾದು..
ಇರುಳ ನಿದ್ದೆಯ ಕದ್ದು..
ಚಿಂತೆ ಹಾಸಿಗೆ ಹೊದ್ದು
ಮರಳಿ ಹೊರಳಿ ಬಂದಿದೆ ಸಂಕಟ
ಎದೆಯ ಗೂಡಿಗೆ..
ಹೃದಯದ ಹಾಡಿಗೆ..
ಕರುಳ ನಾದವ ನುಡಿಸಿ..
ಗುಟುಕು ಉಸಿರನು ಸುರಿಸಿ..
ನಿಟ್ಟುಸಿರುಗಳ ಹಡೆದು ಬಂದಿದೆ ಸಂಕಟ.
ಮನದ ಬಾಗಿಲಿಗೆ ಮರಳಿ ಬಂದಿದೆ ಸಂಕಟ
ಚರಾ ಚರ ಮುಟ್ಟಿ
ಸುರಾಸುರರ ತಟ್ಟಿ
ಕಟ್ಟಿ ಹಾಡಿದೆ ಸಂಕಟ..
ಸುಲಬಕೆ ಬಿಚ್ಚಿಕೊಳ್ಳದೆ ಕಗ್ಗಂಟ
ಏಸು ಬಣ್ಣಗಳ ಕಳಚಿ
ಏಸು ಕನಸುಗಳ ನುಂಗಿ
ಬೆಳಕ ಹಾದಿಯ ತುಂಬಾ ಕತ್ತಲೆ ಹಾಸಿಗೆ ಹಾಸಿ..
ತನ್ನ ಹಸುವೆ ತಾನೇ ನೀಗಿ ಕೊಳ್ಳಲು..
ಮನದ ಬಾಗಿಲಿಗೆ ಮರಳಿ ಬಂದಿದೆ ಸಂಕಟ

**- ದೇವರಾಜ್** ಹುಣಸಿಕಟ್ಟಿ

### ಗರಿ ಮೂಡಿದ ಕ್ಷಣ




ಹೊಸದಾಗಿ ಪಟ್ಟಾಪಟ್ಟೆ ಸುಣ್ಣಬಣ್ಣ ಬಳಿದ ಹೊಗೆಕೊಳವೆಗಳು
ನಮ್ಮ ಹಿರಿಯರು ವಂಶಜರಿಗಾಗಿ ಬಿಟ್ಟುಹೋದ ರಚನೆಗಳು
ಮಾತ್ರವಲ್ಲ. ಇವುಗಳಲ್ಲಿ ಗೂಡು ಕಟ್ಟುವ ಸಾಹಸ ತೋರಿದ
ಪೆರಿಗ್ರೀನ್ ಗಿಡುಗಗಳಿಗೆ ವಾಸಸ್ಥಾನ ಕೂಡಾ.
ಗಂಟೆಗೆ ಇನ್ನೂರು ಮೈಲಿ ಕ್ರಮಿಸುತ್ತಾ ಹಾರಿ ಬಂದಿವೆ,
ಯಾವ ಮಿಕವೂ ತಪ್ಪಿಸಿಕೊಳ್ಳಲಾರದು ಅಂಥ ವೇಗ, ಶಕ್ತಿ.
ಇಲ್ಲಿ ಗೂಡು ಕಟ್ಟಿ ಪ್ರಾರಂಭಿಸಿವೆ ವಂಶಾಭಿವೃದ್ಧಿಯ ಕೆಲಸ.
ನಿಶ್ಚಯ ನಂಬಿಕೆಗಳ ಕೂಟವೆಂದರೆ ಆಗದು ಅತಿಶಯೋಕ್ತಿ.
ನೀವಿಬ್ಬರೂ ಅಲ್ಲೇ ಎದೆಯೆತ್ತಿ ನಿಂತು ಗಮನಿಸುತ್ತಿದ್ದಿರಿ
ಹಾರಲು ಕಲಿತಾಗ ನಾವು ರೆಕ್ಕೆಗಳಲ್ಲಿ ಒಗ್ಗೂಡಿಸಿಕೊಂಡು ಧೈರ್ಯ.
ಮೊದಲ ಸಲ ನಾವು ಬೇಟೆಯ ಮೇಲೆ ಎಗರಿದಾಗಲೂ ಮತ್ತು
ಹುಡುಕಿಕೊಂಡಾಗ ಒಡನಾಡಿಗಳನ್ನು ಮಾಡುತ್ತಾ ಪ್ರಣಯರವ.
ಪಾಲಕರು ನೀವು, ಎಲ್ಲೇ ಇರಲಿ, ನಮ್ಮ ಮೇಲೆ ಇಟ್ಟಿದ್ದಿರಿ ಹದ್ದಿನ ಕಣ್ಣು
ನಾವು ಗರಿಬಿಚ್ಚಿ ಹಾರಿ ಅಳೆಯುವವರೆಗೂ ಆಕಾಶದ ಎತ್ತರವನ್ನು.
ಮೇವ್ ಓ ಸಲೈವನ್

**- ಸಿ ಪಿ** ರವಿಕುಮಾರ್

### ವಿರಾಗಿಣಿ

ಅವಳೊಬ್ಬ ವಿದ್ಯಾವಂತೆ, ಆದರೂ ಅಮಾಯಕಿ. ಮದುವೆಯಾಯ್ತು ಅಷ್ಟೇ... ಮಿಲನವಿಲ್ಲ, ಮಕ್ಕಳಿಲ್ಲ. ಸಂಸಾರವಿಲ್ಲ ನಿಟ್ಟುಸಿರೂ ಇಲ್ಲ, ಗಂಡನಿಗೆ ತನ್ನ ಬಗ್ಗೆ ಆಸಕ್ತಿ ಇಲ್ಲ ಅಂತ ಗೊತ್ತಾದಾಗ ಆಕೆ ಒತ್ತಾಯಿಸಲಿಲ್ಲ. ಗಂಡನಿಗಿನ್ನೊಂದು ಸಂಬಂಧ ಇರುವುದು ಗೊತ್ತಾದಾಗಲೂ ಪ್ರತಿಭಟನೆ ಇಲ್ಲ, ಅಷ್ಟು ಸರಳೆ, ಸಹಜೆ. ಗಂಡನ ಆಸ್ತಿ ಬಂದಿದೆ. ತವರಿನಲ್ಲೇ ಸೋದರರ ಸಂಸಾರದಲ್ಲೇ ಯೋಗಿಣಿ ಆಕೆ. ಆಸೆ ಬೇಸರವಿಲ್ಲ. ಕನಸು ಕಾಣುತ್ತಾ ಕೊರಗುವುದಿಲ್ಲ. ಅವಳು ಮಾಯೆಯಾಗಲಿಲ್ಲ, ಮಾಯೆ ಅವಳ ಹತ್ತಿರವೂ ಸುಳಿಯಲಿಲ್ಲ. ಅವಳೊಬ್ಬ ನಿಶ್ಚಿಂತ ವಿರಾಗಿಣಿ....



## ಒಂದು ಪದ್ಯ ಬಗೆಯುತ್ತಾ ಮೌನದ ಮಡಿಲಿಗೆ

**ಮುಂದಿನ ಚರಣಗಳಲ್ಲಿ ಕರುಗಳ ಗಂಟೆಯ ಕಿಣಿ ರವ, ನಿರ್ಝರ ಮರ್ಮರ ನಾದ, ಖಗದಿಂಚರ, ಮೃಗ ಕೂಜನ, ಡೇಗೆಯ ರೆಕ್ಕೆಯ ಹೊಯ್ಲು, ರೈತರ ಮಂಜುಳ ವಾಣಿ, ಗೊಲ್ಲತಿಯರ ನಡೆ ಮಾತು ಇವನ್ನೆಲ್ಲ ಪುತಿನ ಉಲ್ಲೇಖಿಸುತ್ತಾರೆ. ಪುತಿನ ಯಾಕೆ ಈ ಸದ್ದುಗಳನ್ನು ಮೌನ ಎನ್ನುತ್ತಿದ್ದಾರೆ? ಈ ಸದ್ದುಗಳಲ್ಲಿ ಒಂದು ಬೆಳವಣಿಗೆಯಿದೆ. ಅದು ಪಶುಲೋಕ, ಪಕ್ಷಿಲೋಕದಿಂದ ನಿಧಾನವಾಗಿ ಮನುಷ್ಯಲೋಕಕ್ಕೆ ದಾಟುತ್ತಿದೆ.**

ಪುತಿನ ಮೂಲಭಾವ ಸಾವಧಾನ ಮತ್ತು ಭಕ್ತಿ. ಅವಸರ, ತರ್ಕ, ವಾಗ್ವಾದಗಳಿಗೆ ದಕ್ಕದ ಕೆಲವು ವಿಚಿತ್ರ ಸಂಗತಿಗಳು ಸಾವಧಾನಕ್ಕೆ ಮಾತ್ರ ದಕ್ಕುತ್ತವೆ. ಅದರಲ್ಲಿ ಇದೂ ಒಂದು. ಮೌನದ ಕುರಿತ ಈ ಒಳನೋಟ ಮಾತಿಗೂ ವಿಚಾರಕ್ಕೆ ದಕ್ಕಲು ಹೇಗೆ ಸಾಧ್ಯ? ಅದು ಮೌನಕ್ಕೆ ದಕ್ಕಬೇಕಲ್ಲವೆ?

ಇತ್ತೀಚೆಗೆ ಮೇಲುಕೋಟೆಗೆ ಭೇಟಿ ನೀಡಿದಾಗ ಅಲ್ಲಿರುವ ಕವಿ ಪುತಿ ನರಸಿಂಹಾಚಾರ್ ಅವರ ಮನೆ, ಮೇಲುಕೋಟೆಯ ಎರಡು ವಿಶಿಷ್ಟ ದೇವಾಲಯಗಳು, ಬೆಟ್ಟ, ಅಲ್ಲಿನ ದಿವ್ಯ ಭಾವಗಳೆಲ್ಲ ಕಾಡಿದವು. ಪುತಿನರ ಯದುಗಿರಿಯ ಮೌನ ವಿಕಾಸ ಕವಿತೆ ನೆನಪಾಯಿತು. ಅದನ್ನು ನಾನು ಹೇಗೆ ನನ್ನದನ್ನಾಗಿಸಿಕೊಂಡೆ ಎಂದು ಹೇಳುವುದು ಈ ಲೇಖನದ ಉದ್ದೇಶ. ಕವಿತೆ ಮೂರು ಭಾಗದಲ್ಲಿದೆ.

ಮೂಡಣ ಕಣಿವೆಯ ಹಿಮದವಕುಂಠನ/ ರವಿಕರ ಸ್ಪರ್ಶಕೆ ಜಾರುತಿದೆ, ನಾಡದೊ ಹಿಗ್ಗುತ ನಾಚುತ ಮೆಲ್ಲನೆ/ ಮೈಸಿರಿಯನು ತಾ ತೋರುತಿದೆ ಎಂದು ಶುರುವಾಗುತ್ತದೆ. ರವಿಕರ ಸ್ಪರ್ಶ ಎಂಬಲ್ಲಿ ಇರುವ ಕರ- ಕಿರಣ, ಕೈ ಎಂಬ ಶ್ಲೇಷೆಯನ್ನು ಮೆಚ್ಚಬಹುದು. ರವಿಯನ್ನು ಪುರುಷನಾಗಿಯೂ, ಮೂಡಣ ಕಣಿವೆಯನ್ನು ಹೆಣ್ಣಾಗಿಯೂ ಕಾಣಿಸಿದ ಈ ಸಾಲುಗಳು ಕರಸ್ಪರ್ಶ ಎಂಬ ಮೂಲಕ ಪ್ರಣಯದ ಸೂಚನೆಯನ್ನೂ ತೋರಿವೆ.

ಮುಂದಿನ ಚರಣದಲ್ಲಿ, ಬನದೊಳು ಕೆರೆಯೊಳು ಕಮರಿಯ ಬುಡದೊಳು/ ದಿಗಂತ ವಿಸ್ತೃತ ನಾಡಿನೊಳು/ ಇನನರುಣಾಂಶುಗಳೆಡೆ ಮಿಡಿವವು/ ತರುಜಲಗಳ ನೆರೆ ನಲವಿನೊಳು. ಮೊದಲಿನ ಪಲ್ಲವಿಯಲ್ಲಿ ಬಂದ ಪ್ರಣಯಭಾವದ ಮುಂದಿನ ಭಾಗ- ಸೃಷ್ಟಿಯೂ ಆಗಿದೆಯೆಂಬ ಸೂಚನೆ ಇದೆ. ಅದು ಯಾವ ಸೃಷ್ಟಿ? ಜನಪದದಂತರ್ಯಾಮಿಯ ಯೋಗ/ ಸಮಾಧಿಯ ಕಲಕಿದೆ ಸುಮ್ಮಾನ/ ಕಣಿವೆಯ ತಳದಂಚಿನೊಳೊಯ್ಯೊಯ್ಯನೆ/ ಎಚ್ಚರುತಿದೆ ಮಾಗಿಯ ಮೌನ.

ಜನಪದದ ಅಂತರ್ಯಾಮಿ ಯೋಗ ಸಮಾಧಿಯಲ್ಲಿದ್ದಾನೆ. ಮೂರನೇ ಚರಣದಲ್ಲಿ ಬಂದ ಯೋಗ ಸಮಾಧಿ ಹಾಗೂ ಎಚ್ಚರುತಿದೆ ಮಾಗಿಯ ಮೌನ ಎಂಬ ಪದಗುಚ್ಛಗಳು ಇಲ್ಲಿ ನಮ್ಮನ್ನು ಹೆಚ್ಚಿನ ಅನ್ವೇಷಣೆಗೆ ಪ್ರೇರೇಪಿಸುತ್ತಿವೆ.

ಮುಂದಿನ ಚರಣಗಳಲ್ಲಿ ಕರುಗಳ ಗಂಟೆಯ ಕಿಣಿ ರವ, ನಿರ್ಝರ ಮರ್ಮರ ನಾದ, ಖಗದಿಂಚರ, ಮೃಗ ಕೂಜನ, ಡೇಗೆಯ ರೆಕ್ಕೆಯ ಹೊಯ್ಲು, ರೈತರ ಮಂಜುಳ ವಾಣಿ, ಗೊಲ್ಲತಿಯರ ನಡೆ ಮಾತು ಇವನ್ನೆಲ್ಲ ಪುತಿನ ಉಲ್ಲೇಖಿಸುತ್ತಾರೆ. ಪುತಿನ ಯಾಕೆ ಈ ಸದ್ದುಗಳನ್ನು ಮೌನ ಎನ್ನುತ್ತಿದ್ದಾರೆ? ಈ ಸದ್ದುಗಳಲ್ಲಿ ಒಂದು ಬೆಳವಣಿಗೆಯಿದೆ. ಅದು ಪಶುಲೋಕ, ಪಕ್ಷಿಲೋಕದಿಂದ ನಿಧಾನವಾಗಿ ಮನುಷ್ಯಲೋಕಕ್ಕೆ ದಾಟುತ್ತಿದೆ. ಕರುಗಳ ಗಂಟೆಯ ಕಿಣಿ ರವದಿಂದ, ಖಗದಿಂಚರದಿಂದ, ರೈತರ ಮಂಜುಳವಾಣಿಗೂ ಗೊಲ್ಲತಿಯರ ಮಾತಿಗೂ ಬೆಳೆದಿದೆ. ಮೂಡಣ ಕಣಿವೆಯ ತಳದೊಳಗಾಲಿಸು ಎಚ್ಚತ್ತಿದೆ ಮೌನ!

ಸಾಸಿರ ದನಿಯೊಳು ಚಿಗುರಿದೆ ಮೌನ ಎನ್ನುತ್ತಾರೆ. ರವಿಯ ಜೊತೆಗೆ ಮೌನವೂ ಎಚ್ಚೆತ್ತಿದೆಯಂತೆ. ಆದರೆ ಇಲ್ಲಿ ಕವಿ ಸದ್ದುಗಳನ್ನು ಕೊಡುತ್ತಿದ್ದಾರೆ. ಸಾವಿರ ದನಿಗಳಲ್ಲಿ ಮೌನ ಚಿಗುರಿದೆಯಂತೆ! ಈ ಒಳನೋಟ ಹೊಸದು!

ಮೌನ ಚಿಗುರುವುದು ಮೌನದಲ್ಲಿ ಅಲ್ಲ, ಸದ್ದಿನಲ್ಲಿ. ಮೌನದ ಗಾಢತೆ, ಪಾವಿತ್ರ್ಯ, ಸವಿ ಗೊತ್ತಾಗ ಬೇಕಾದರೆ ಸದ್ದುಗಳು ಬೇಕು ಎನ್ನುತ್ತಿದ್ದಾರೋ ಕವಿ? ನುಡಿವೆತ್ತಿದೆ ಮೌನ, ಸುಂದರ ಮೌನ, ಸವಿ ಮೌನ. ಸವಿ ಎನ್ನುವುದು ಇಲ್ಲಿ ನಾಮಪದವೂ, ಕ್ರಿಯಾಪದವೂ ಆಗಿದೆಯೊ? ಈ ಪ್ರಶ್ನೆಗಳನ್ನಿಟ್ಟು ಕೊಂಡು ಮುಂದಿನ ಭಾಗಕ್ಕೆ ಹೋಗುವ. ಮುಂದೆ ಯದುಗಿರಿಯ ಪಡುವಣ ಕಣಿವೆಯ ಮೌನ. ಪಡುವಣ ಎಂದಾಗ ಸೂರ್ಯ ಮುಳುಗುವ, ದಿನ ಮುಗಿಯುವ ಭಾವ ಬರುತ್ತಿದೆ.

ಸಂಜೆಗೆ ಬೆಳಗಿನಂತೆ ಚಪಲದ, ಸೃಷ್ಟಿಯ, ಚುರುಕುತನದ ಚಟುವಟಿಕೆಯ ಚಿತ್ರವಿಲ್ಲ; ಅದರದು ಯಾವಾಗಲೂ ತುಂಬು ಘನತೆಯ ಭಾವ. ಮೂಡಣ ಕಣಿವೆಯಲ್ಲಿ ಇಂಚರಗಳಿವೆ. ಅವುಗಳ ಮೂಲಕ ನಾವು ಮೌನವನ್ನು ಸೃಷ್ಟಿಸಿಕೊಳ್ಳಬೇಕಾಗಿದೆ. ಆದರೆ, ಪಡುವಣದದರೋ, ಮೌನ ಆಗಲೇ ಇದೆ. ಅದು ಸ್ಥಾಪಿತ ಮೌನ, ನಿರ್ಭರ ಮೌನ, ಕದಡದ ಮೌನ.

ಒಮ್ಮೊಮ್ಮೆ ಅಲ್ಲಿ ದನಿ ಮಿಡಿಯುತ್ತದಾದರೂ ಅದು ಮೌನದ ಗಾಂಭೀರ್ಯ ಅರಿಯದ ಹಸುಳೆಯ ಮಾತಿನಂತೆ. ಮೊದಲ ಭಾಗದಲ್ಲಿ ಬಂದ ಸೃಷ್ಟಿಯ ಚಿತ್ರವೂ ಇಲ್ಲಿನ ಹಸುಳೆಯ ಚಿತ್ರವೂ ಕೂಡಿ ಕೊಳ್ಳುತ್ತಿವೆ. ಕಣಿವೆ ರಾಜರ್ಷಿಯಂತಿದೆ. ಭಕ್ತರೂ ಬಂದಿದ್ದಾರೆ. ತರುಗಳೂ ನೀರವವಾಗಿ ನಿಂತಿವೆ. ಬಸಿರಿನಲ್ಲಿ ಲಯವನ್ನು ಹುದುಗಿಸಿ ಗಿರಿ ನಿಂತಿದೆ- ದಮದ ಹಾಗೆ. ದಮ ಎಂಬ ಯೋಗದ ಪರಿಭಾಷೆ ಇಲ್ಲಿ ಸೆಳೆಯುತ್ತಿದೆ.

ದಮ ಎಂದರೆ ಬಾಹ್ಯ ಇಂದ್ರಿಯಗಳನ್ನು ನಿಗ್ರಹಿಸುವುದು. ಗಿರಿಯು ಯೋಗಿಯಾಗಿ ನಿಂತಿದೆ. ಅದು ಶಬ್ದಕ್ಕೆ, ಬಿಸಿಲಿನ ಸ್ಪರ್ಶಕ್ಕೆ ವಿಚಲಿತವಾಗದು. ಅದರೊಳಗೆ ಒಂದು ಮೌನವಿದೆ. ಈಗ ಮೌನದ ವಿಕಾಸ ಎಂಬ ಪದಗುಚ್ಛಕ್ಕೆ ಯಾವುದೋ ಅರ್ಥ ಸುಳಿದಂತಾಗುತ್ತಿದೆ.

ಮುಂದಿನ ಸಾಲಿನಲ್ಲಿ ದಮದ ಜೊತೆಗೆ ಶಮವೂ ಬಂದಿದೆ. ಶಮ ಎಂದರೆ ಅಂತರಂಗದ ನಿಗ್ರಹ. ಇದೂ ಯೋಗದ ಪರಿಭಾಷೆ. ಪಡುವಣ ಕಣಿವೆಯಲ್ಲಿ ಮೌನ ನಿದ್ರಿಸುತ್ತಿದೆ. ಈ ಮೌನವನ್ನು ರಾಗ ಮೋದಗಳು ಕಲಕುತ್ತಿಲ್ಲ, ಇದು ಸವಿಮೌನವಲ್ಲ; ಇದು ಘನ ಮೌನ. ಇದು ಸೋಜಿಗದ ಮೌನ. ಮೊದಲ ಭಾಗದ ಲೌಕಿಕದ ಚಿತ್ರಗಳಿಂದ ಎರಡನೇ ಭಾಗದ ಅಲೌಕಿಕಕ್ಕೆ ಆಗುವ ಅಂತರಂಗದ ವಿಕಾಸವನ್ನು ಕವಿ ಹೇಳುತ್ತಿದ್ದಾರೆ.

ಮೂರನೇ ಭಾಗದಲ್ಲಿ ಯದುಗಿರಿಯ ದೇಗುಲದ ಮುಂಜಾನೆಯ ಮೌನವಿದೆ. ಹಿಮ ಬೀಳುತಿದೆ, ಚಳಿ ಮೂಡುತಿದೆ, ಮಾಗಿಯು ಗಾದಿಯನೇರುತಿದೆ; ತಮ ಹದುಗುತಿದೆ, ಬೆಳಕೊಗೆಯುತಿದೆ, ಬೆಳ್ಳಿಯು ಮಂಜೊಳು ಕರಗುತಿದೆ. ಮಾಗಿ ಎಂಬ ಪದ ನನ್ನಲ್ಲಿರುವ ಅರ್ಥ ಅಷ್ಟೇ ಅಲ್ಲ ಎನ್ನುತ್ತಿದೆ. ಮೂರು ಜಾವದ ಇರುಳಿನ- ಅಂತ್ಯದ ಆಲಿಂಗನದ ಸುಪ್ತಿಯಲ್ಲಿ - ಇರವು ಅಳಿದ ಇರುಳು- ಅಂತ್ಯವನ್ನು ಪದೇ ಪದೇ ಸೂಚಿಸುವ ಈ ಪದಗಳು ಕವನವನ್ನು ಒಂದು ತಾರ್ಕಿಕ ಅಂತ್ಯಕ್ಕೆ ಮುಟ್ಟಿಸಲಿವೆಯೋ ಎಂಬಂತೆ ಭಾಸವಾಗುತ್ತಿದೆ.

ಇಲ್ಲಿ ದೇವರ ಸಾನ್ನಿಧ್ಯದಲ್ಲಿ ಭಕ್ತರು ಸೇರಿದ್ದಾರೆ. ಎರಡನೇ ಭಾಗದಲ್ಲಿ ಗಿರಿಯೆಂಬ ರಾಜರ್ಷಿಯ ಸಾನ್ನಿಧ್ಯದಲ್ಲಿ ತರುಗಳು ಸೇರಿದ್ದು ನೆನಪಾಗುತ್ತಿದೆ. ಇಲ್ಲಿ ಗುಡಿಕತ್ತಲೆಯಲ್ಲಿ ಹಣತೆಗಳು ರಂಜಿಸಿದ್ದು ತಮವೇ ಪುಷ್ಪಿತವಾದಂತೆ- ಕತ್ತಲೆಯೇ ಹೂವಾದಂತೆ- ಇದೆ.

ಜೀವಾತ್ಮ ಮಾನವನ ದೇಹದಲ್ಲಿ ಸೇರಿಕೊಂಡಿದೆ. ಈಗ ಅದು ದೇವನ ಸನಿಹದಲ್ಲಿ ನಿಜಾನಂದವನ್ನು ಪಡೆಯುವ ಯತ್ನದಲ್ಲಿದೆ; ಪಾಶುರ ಭಕ್ತಿಗೀತೆಗಳ ಮೂಲಕ ಆತನನ್ನು ಸ್ತುತಿಸುತ್ತಿದೆ. ನಿಜಾ ನಂದ ಹಾಗೂ ಜೀವಾತ್ಮ ಎಂಬ ಪದಗಳು ಈ ಪದ್ಯವನ್ನು ನೇರವಾಗಿ ಅಧ್ಯಾತ್ಮದ ಮಟ್ಟಕ್ಕೆ ಒಯ್ಯಲು ಹವಣಿಸುತ್ತಿವೆ.

ಸಹಸ್ರ ಕಂಠದಿ ಮೇಳವಿಸಿದೆ ನುತಿ/ ದೇಗುಲವಾಗಿದೆ ಘೋಷವತಿ / ಆತ್ಮಾನಂದಕೆ ತನ್ನೇಕಾಂತದಿ/ ನಿಯತಿಯು ಮಿಡಿಯುವ ಘೋಷವತಿ ಇಲ್ಲಿ ಘೋಷವತಿ ಎಂಬುದು ಒಂದು ವೀಣೆಯ ಹೆಸರು. ಆತ್ಮಾನಂದಕ್ಕಾಗಿ ತನ್ನೊಳಗೇ

ಅವಿತುಕೊಂಡ ಘೋಷವತಿಯಾಗಿದೆ ನಿಯತಿ. ಆದರೆ ಪೂಜೆಯ ಯಾವುದೋ ಒಂದು ಹಂತದಲ್ಲಿ ಮಂಗಳಾರತಿ ಪೂರ್ಣಗೊಂಡು ಮಂಗಳವಾದ್ಯಗಳೆಲ್ಲ ನಿಂತಾಗ ಥಟ್ಟನೆ ಒಂದು ಮೌನ ಕವಿಯುತ್ತದಲ್ಲ; ಹಾಗೆ ಒಂದು ನೀರವ ಕವಿದಿದೆ ಇದ್ದಕ್ಕಿದ್ದಂತೆ.

ಜೀವವು ಭಾವಕೆ ಸಲ್ಲುವುದು ಮತ್ತು ಗೀತವು ಕೃತಕೃತ್ಯವಾಗುವುದು- ಅದು ರಸದ ಉತ್ತುಂಗವನ್ನು ಮುಟ್ಟಿದಾಗ. ಕವಿತೆ, ಕತೆ, ನೃತ್ಯ, ಚಿತ್ರಕಲೆ- ಯಾವ ಸೃಜನಶೀಲತೆಯೂ ಇರಬಹುದು- ಕೃತಕೃತ್ಯವಾಗುವುದು ಆ ಸೃಜನಶೀಲನ ಭಾವವನ್ನು ಸಹೃದಯನ ಜೀವ ಮುಟ್ಟಿದಾಗ. ಸೃಜನಶೀಲಗಳಿಗೆ ಕಲಾವಿದನಲ್ಲಿ ಮೂಡುವುದೂ ಲೌಕಿಕ- ಅಲೌಕಿಕಗಳ ಒಂದು ಸ್ಪರ್ಶದ ಗಳಿಗೆಯಲ್ಲಿ. ಬೇಂದ್ರೆ, ತಮ್ಮ ಕವಿತೆಗಳನ್ನು ಬರೆದವನು ಅಂಬಿಕಾತನಯದತ್ತ ಎನ್ನುತ್ತಿದ್ದರು. ಯಾವುದೋ ಒಂದು ಮತ್ತ ಸ್ಥಿತಿಯಲ್ಲಿ ಅತ್ಯುತ್ತಮ ಪ್ರದರ್ಶನ ನೀಡುವ ಕಲಾವಿದರನ್ನು ನಾವು ನೋಡಿದ್ದೇವೆ. ಆ ದಡ ಸಿಕ್ಕಿತೆ ಆತುಮಕೆ? ಎಂಬುದು ಕವಿಯ ಪ್ರಶ್ನೆ. ಯೋಗ ಸಮಾಧಿಯೂ ನೋವು ಸಾವುಗಳನ್ನು ದಾಟಿದ ಒಂದು ಆ ದಡ. ಕಡಲಿನಂತೆ ಮೊರೆದ ಲೌಕಿಕ ಜೀವನದ ಯಾವುದೋ ಒಂದು ಕ್ಷಣದಲ್ಲಿ ಜೀವಕ್ಕೆ ಇದರ ಅರ್ಥಪೂರ್ಣತೆ ಹಾಗೂ ನಿರರ್ಥಕತೆಯೆಲ್ಲ ಥಟ್ಟನೆ ಅರ್ಥವಾಗಿ, ಭಾವಕ್ಕೆ ದಕ್ಕಿದಂತಾಗಿ, ಜೀವವು ಬೆಚ್ಚಿ ಬೆರಗಾಗಿ ಮೌನವಾಗಿ ನಿಂತುಬಿಟ್ಟಿದೆ.

ಈ ಮೌನಕ್ಕೆ ಸಾಟಿಯೇ ಇಲ್ಲ. ಈ ಮೌನವನ್ನು ಮೀರಿದ ಮೌನವೂ ಇಲ್ಲ. ಇದು ಚಿನ್‌ಮೌನವಂತೆ. ಮೊದಲ ಭಾಗದ್ದು ಸವಿಮೌನ, ಎರಡನೆಯದು ಘನಮೌನ, ಮೂರನೆಯದು ಚಿನ್‌ಮೌನ. ಮೊದಲಿನದ್ದು ಅಪ್ಪಟ ಲೌಕಿಕ ಮೌನ. ಅದು ಲೌಕಿಕದ ಸದ್ದು ಸಾಧನೆಗಳಿಂದ ಪ್ರೇರಿತವಾದದ್ದು. ಎರಡನೆಯದ್ದು ಯೋಗದ್ದು. ಅಲ್ಲಿ ಗಿರಿಯೂ ರಾಜರ್ಷಿಯಾಗಿದೆ.

ಮೂರನೆಯ ಭಾಗದಲ್ಲಿ ಮೌನದ ಅನುಭವವನ್ನು ಪಡೆಯುತ್ತಿರುವುದು ಜನತೆಯೇ ಹೊರತು ಯೋಗಿಯಲ್ಲ. ಯೋಗಿಯ ಮೌನಕ್ಕೆ ಏರಿಳಿತಗಳಿಲ್ಲ, ಕಾವ್ಯಾನಂದವು ಬ್ರಹ್ಮಾನಂದದ ಸಹೋದರ ನಂತೆ. ಬ್ರಹ್ಮಾನಂದ ಸಾಮಾನ್ಯರಿಗೆ ದೂರವೇ. ಆದರೆ ಸ್ವಲ್ಪ ಪ್ರಯತ್ನಪಟ್ಟರೆ ಹೆಚ್ಚಿನವರು ಕಾವ್ಯಾ ನಂದದ ಬಳಿಗೆ ಹೋಗಬಲ್ಲರು.

ಕಲೆಯಾಗಲೀ ಭಕ್ತಿಯಾಗಲೀ ಅನುಭವಕ್ಕೆ ದಕ್ಕಬೇಕಾದರೆ ಲೌಕಿಕ ಜೀವನವೇ ಬೇಕು. ಲೌಕಿಕ ಜೀವನದ ಸಾಧನೆ ಸೋಲುಗಳ ತುರೀಯ ಸ್ಥಿತಿಯಲ್ಲೇ ಒಂದು ಸೃಜನಶೀಲ ಮೌನದ ಉತ್ತುಂಗ ಗೊತ್ತಾಗುವುದು ಅನ್ನುತ್ತಿದ್ದಾರೆಯೇ ಕವಿ? ಮಾತಿನ ಬಗ್ಗೆ ನಾವು ಸಾಕಷ್ಟು ಮಾತಾಡಿದ್ದೇವೆ.

ಆದರೆ ಮೌನಕ್ಕೂ ಒಂದು ವಿಕಾಸವಿದೆ; ಅದನ್ನೂ ನಾವು



ಶೋಧಿಸಬಹುದು ಎಂಬುದನ್ನು ಪುತಿನ ಹೇಳುತ್ತಾರೆ. ಮೌನದ ವಿಕಾಸ ಎಂದರೆ ಮನುಷ್ಯನ ಆತ್ಮದ ಅಂತರಂಗದ ವಿಕಾಸ; ಅಧ್ಯಾತ್ಮದ ವಿಕಾಸ; ಯೋಗದ ವಿಕಾಸ; ಕಲೆಗಳ ವಿಕಾಸ; ಮನುಷ್ಯ ಸೃಜನಶೀಲನಾಗಿ ತನ್ನೊಳಗೆ ತಾನು ಏನನ್ನೆಲ್ಲ ಕಂಡುಕೊಳ್ಳಬಹುದೋ ಅದೆಲ್ಲವೂ ಮೌನದ ವಿಕಾಸ. ಮಾತು ಸೋತು ನಿಲ್ಲುವಲ್ಲಿ ಮೌನ ಚಿಗುರುತ್ತದೆ; ಅರಳುತ್ತದೆ; ವಿಕಾಸಗೊಳ್ಳುತ್ತದೆ. ಪುತಿನ ಮೂಲ ಭಾವ ಸಾವಧಾನ ಮತ್ತು ಭಕ್ತಿ. ಅವಸರ, ತರ್ಕ, ವಾಗ್ವಾದಗಳಿಗೆ ದಕ್ಕದ ಕೆಲವು ವಿಚಿತ್ರ ಸಂಗತಿಗಳು ಸಾವಧಾನಕ್ಕೆ ಮಾತ್ರ ದಕ್ಕುತ್ತವೆ. ಅದರಲ್ಲಿ ಇದೂ ಒಂದು. ಮೌನದ ಕುರಿತ ಈ ಒಳನೋಟ ಮಾತಿಗೂ ವಿಚಾರಕ್ಕೆ ದಕ್ಕಲು ಹೇಗೆ ಸಾಧ್ಯ? ಅದು ಮೌನಕ್ಕೆ ದಕ್ಕಬೇಕಲ್ಲವೆ? ಈ ವಿಚಾರದಲ್ಲಿ ಪುತಿನರನ್ನು ಗೋಪಾಲಕೃಷ್ಣ ಅಡಿಗರ ಜೊತೆ ಹೋಲಿಸಿ ನೋಡಿದರೆ ವ್ಯತ್ಯಾಸ ವಿಶಿಷ್ಟತೆಗಳು ಗೊತ್ತಾಗ ಬಹುದು.

ಅಡಿಗರಿಗೆ ಮಾತಿನ ಶಕ್ತಿಯ ಮೇಲೆ ಬಹಳ ನಂಬಿಕೆ; ಮಾತು ದೂರದ ಮಿಂಚು ತಂತಿಗಳಿರುವ ಹಾಗೆ, ಒದೆಸಿಕೊಳ್ಳದೆ ಒಳಗೆ ಮಿಂಚುಬಲ ತಿಳಿಯದು ಎನ್ನುತ್ತಾರೆ. ಮೌನದಲ್ಲಿಯೂ ಅವರು ಸ್ಫೋಟಕ್ಕೆ ಕಾದು ಕಿವಿ ಕಂಪಿಸುತ್ತ ಕೂತವರು. ಅವರಿಗೆ ಮೌನದಲ್ಲೂ ಮಾತೇ. ಮೌನದ ನಿಗೂಢ ಗಂಭೀರ ಸಂವಾದದ ಚಟಾಕಿ ಅವರ ಕಾವ್ಯವೆಲ್ಲ ಮಾತಿನ ವಿಜೃಂಭಣೆ.

ಇನ್ನೊಂದು ರೀತಿಯಲ್ಲಿ ಹೇಳುವುದಾದರೆ ಅಡಿಗರ ಕಾವ್ಯ ಮಾತಿನ ನಾನಾ ಅವತಾರಗಳಾದ ಪ್ರತಿಮೆ ಕಟಕಿ ವ್ಯಂಗ್ಯ ವಿಡಂಬನೆ ಟೀಕೆ ವಾಗ್ವಾದಗಳ ವಿಲಾಸ; ಪುತಿನ ಕಾವ್ಯ ಮೌನದ ನಾನಾ ಅವತಾರಗಳಾದ ಸಾವಧಾನ, ಭಕ್ತಿ, ರಸ, ನೆಮ್ಮದಿಗಳ ಗರ್ಭಗುಡಿ. ಮೌನದ ಬಗ್ಗೆ ಮಾತಾಡಬಹುದೆ? ಮೌನದಲ್ಲೆ ಮಾತಾಡಬೇಕು. ಪುತಿನ ಕವಿತೆ ಮೌನದ ಇನ್ನೊಂದು ರೂಪ. ಆ ಪದ್ಯವೇ ಮೌನದ ಒಂದು ವಿಕಾಸ.

**- ಹರೀಶ್** ಕೇರ


# ಶೀಘ್ರದಲ್ಲೇ ಮೇಕೆದಾಟು ವಿಸ್ತೃತ ಯೋಜನಾ ವರದಿ ಸಲ್ಲಿಕೆ

## ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ | ಕೇಂದ್ರ ಬಿಜೆಪಿ ಸರ್ಕಾರದ ವಿರುದ್ಧ ವಾಗ್ದಾಳಿ

• ಪ್ರಜೋದಯ ವರದಿ

**ಬೆಂಗಳೂರು:** ಮೇಕೆದಾಟು ಸಮತೋಲಿತ ಅಣೆಕಟ್ಟು ನಿರ್ಮಾಣಕ್ಕೆ ಶೀಘ್ರದಲ್ಲೇ ಕೇಂದ್ರ ಜಲ ಆಯೋಗಕ್ಕೆ ವಿಸ್ತೃತ ಯೋಜನಾ ವರದಿಯನ್ನು ಸಲ್ಲಿಸಲಾಗುವುದು ಎಂದು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ತಿಳಿಸಿದ್ದಾರೆ.





ಅಧಿಕಾರ ಹಂಚಿಕೆಯ ಗೊಂದಲಗಳ ಹಿನ್ನೆಲೆಯಲ್ಲಿ ಹೈಕಮಾಂಡ್ ಸೂಚನೆಯಂತೆ ಶನಿವಾರ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಜೊತೆ ಉಪಾಹಾರ ಕೂಟ ನಡೆಸಿದ ಬಳಿಕ ಜಂಟಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜಕೀಯವಾಗಿ ಸಿದ್ದರಾಮಯ್ಯ ಅವರ ಹೇಳಿಕೆಗಳಿಗೆ ಬದ್ಧ ಎಂದು ಹೇಳುವ ನಡುವೆಯೇ, ಕೇಂದ್ರ ಸರ್ಕಾರದ ವಿರುದ್ಧವೂ ವಾಗ್ದಾಳಿ ನಡೆಸಿದರು.

ಕೇಂದ್ರ ಸರ್ಕಾರ ಮೆಕ್ಕೆಜೋಳ, ಕಬ್ಬು ಬೆಳೆಗಾರರ ಸಮಸ್ಯೆಗಳ ಬಗ್ಗೆ ಸಹಕಾರ ನೀಡಲಿಲ್ಲ. ಇದನ್ನು ಸಂಸತ್ ಅಧಿವೇಶನದಲ್ಲಿ ನಮ ರಾಜ್ಯದ ಸಂಸದರು ಪ್ರಸ್ತಾಪಿಸಲು ಸಿದ್ದರಾಮಯ್ಯ ಅವರು ಪತ್ರ ಬರೆಯಲಿದ್ದಾರೆ. ಪ್ರಧಾನಮಂತ್ರಿಯವರ ಮೇಲೆ ಒತ್ತಡ ಹೇರಲು ದೆಹಲಿಗೆ ನಿಯೋಗ ಕರೆದುಕೊಂಡು ಹೋಗಲು ನಾವು ಪ್ರಯತ್ನಿಸುತ್ತೇವೆ. ಮೇಕೆದಾಟು ಸೇರಿದಂತೆ ಇತರ ನೀರಾವರಿ ಯೋಜನೆಗಳ ಬಗ್ಗೆಯೂ ಪ್ರಸ್ತಾಪಿಸುತ್ತೇವೆ. ಶೀಘ್ರವೇ ಯೋಜನೆಯ ವಿಸ್ತೃತ ಯೋಜನಾ ವರದಿಯನ್ನು ಸಲ್ಲಿಸುತ್ತೇವೆ ಎಂದರು.

ನಮ ಪಾಲಿನ ತೆರಿಗೆ ಅನುದಾನವನ್ನು ನ್ಯಾಯೋಚಿತವಾಗಿ ಪಡೆಯಲು ಕೂಡ ಕ್ರಮ ಕೈಗೊಳ್ಳುವುದಾಗಿ ಹೇಳಿದರಲ್ಲದೆ, ರಾಜ್ಯದಲ್ಲಿ ವಿರೋಧ ಪಕ್ಷಗಳು ಅವಿಶ್ವಾಸ ನಿರ್ಣಯ, ನಿಲುವಳಿ ಸೂಚನೆ ಸೇರಿದಂತೆ ಏನು ಬೇಕಾದರೂ ಮಾಡಿಕೊಳ್ಳಲಿ. ಅದಕ್ಕೆ ತಕ್ಕ ಉತ್ತರ ನೀಡಲು ನಮಗೆ ಸಾಮರ್ಥ್ಯವಿದೆ ಎಂದ ಅವರು, ದೇಶದಲ್ಲಿ ಪಕ್ಷ ಸಂಕಷ್ಟದಲ್ಲಿದೆ. 2029ರ ಲೋಕಸಭೆ ಚುನಾವಣೆಯಲ್ಲಿ ಮಲ್ಲಿಕಾರ್ಜುನ ಖರ್ಗೆ ಮತ್ತು ರಾಹುಲ್ ಗಾಂಧಿಯವರ ನೇತೃತ್ವದಲ್ಲಿ ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ಬರಲಿದೆ ಎಂದು ಅವರು ವಿಶ್ವಾಸ ವ್ಯಕ್ತಪಡಿಸಿದರು.

**ಇಬ್ಬರ ಮುಖದಲ್ಲಿ ಮಂದಹಾಸ:** ಉಪಾಹಾರ ಕೂಟ ಮುಗಿಸಿ ಜಂಟಿ ಪತ್ರಿಕಾಗೋಷ್ಠಿಗೆ ಆಗಮಿಸಿದಾಗ, ಇಬ್ಬರ ಮುಖದಲ್ಲೂ ಮಂದಹಾಸ ಮಿನುಗುತ್ತಿತ್ತು. ಮುಖ್ಯಮಂತ್ರಿ ಸಿದ್ದರಾಮಯ್ಯ ಮಾತನಾಡಲು ಪ್ರಯತ್ನಿಸಿದಾಗ ಧ್ವನಿಯಲ್ಲಿ ಅಸ್ಪಷ್ಟತೆ ಇತ್ತು. ಪಕ್ಕದಲ್ಲಿ ಕುಳಿತಿದ್ದ ಡಿ.ಕೆ.ಶಿವಕುಮಾರ್ ಅವರು ಮೈಕ್ ತೆಗೆದುಕೊಂಡು ಸ್ವಿಚ್ ಆನ್ ಮಾಡಿ, ಸರಿ ಮಾಡಿ ಕೈಗೆ ಕೊಟ್ಟರು.

ಸಿದ್ದರಾಮಯ್ಯ ಅವರು, ಉಪಾಹಾರ ಚೆನ್ನಾಗಿತ್ತು. ನಾನು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಮತ್ತು ಶಾಸಕ ಎ.ಎಸ್.ಪುನ್ನಣ್ಣ ಮೂವರು ಉಪಾಹಾರ ಸೇವಿಸಿದ್ದೇವೆ. ಅಲ್ಲಿ ಏನೂ ಮಾತನಾಡಲಿಲ್ಲ ಎಂದು ಲಘು ಹಾಸ್ಯ ಮಾಡಿದರು.

ಡಿ.ಕೆ.ಶಿವಕುಮಾರ್ ಅವರು ಇಂದು ತಮ ಮನೆಗೆ ಬಂದಿದ್ದರು. ಇಬ್ಬರೂ ಸೇರಿ ಉಪಾಹಾರ ಸೇವಿಸಿದ್ದೇವೆ. ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ.ವೇಣುಗೋಪಾಲ್ ಅವರು, ಮುಖ್ಯಮಂತ್ರಿಯವರ ಕಾನೂನು ಸಲಹೆಗಾರ ಪೊನ್ನಣ್ಣ ಅವರಿಗೆ ಕರೆ ಮಾಡಿ, ಮುಖ್ಯಮಂತ್ರಿ ಅವರು ಡಿ.ಕೆ.ಶಿವಕುಮಾರ್ ಅವರನ್ನು ಉಪಾಹಾರಕ್ಕೆ ಕರೆಯುವಂತೆ ಸೂಚಿಸಿದರು.

ಅದೇ ಸಮಯದಲ್ಲಿ ಡಿ.ಕೆ. ಶಿವಕುಮಾರ್ ಅವರಿಗೂ ಕರೆ ಮಾಡಿ, ಉಪಾಹಾರಕ್ಕೆ ಹೋಗುವಂತೆ ಹೇಳಿದರು. ಈ ವೇಳೆ ಡಿ.ಕೆ. ಶಿವಕುಮಾರ್ ಅವರು ಮುಖ್ಯಮಂತ್ರಿಯವರೇ ನಮ್ಮ ಮನೆಗೆ ಊಟಕ್ಕೆ ಬರುವಂತೆ ಸಲಹೆ ನೀಡಿದರು.

ಪ್ರಸ್ತುತ ನಮ್ಮ ಮನೆಯಲ್ಲಿ ಉಪಾಹಾರ ಕೂಟ ನಡೆಸಲು ಹೈಕಮಾಂಡ್ ಸೂಚನೆ ನೀಡಿದೆ. ಮುಂದಿನ ದಿನದಲ್ಲಿ ನಿಮ್ಮ ಮನೆಯಲ್ಲಿ ಊಟಕ್ಕೆ ಬರುತ್ತೇನೆ. ಈಗ ಉಪಾಹಾರಕ್ಕೆ ಬನ್ನಿ ಎಂದು ಆಹ್ವಾನಿಸಿದ್ದಾಗಿ ಸಿಎಂ ಹೇಳಿದರು.

# ರಾಜಘಟ್ಟದ ಸರ್ಕಾರಿ ಶಾಲೆ ಉಳಿಸಲು ಆಗ್ರಹ

• ಪ್ರಜೋದಯ ವರದಿ

**ಹಾಸನ:** ಕೆಪಿಎಸ್ ಮ್ಯಾಗ್ನೆಟ್ ಹೆಸರಿನಲ್ಲಿ ಮುಚ್ಚಲು ಹೊರಟಿರುವ ನಗರದ ರಾಜಘಟ್ಟದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಉಳಿಸುವಂತೆ ಎಐಡಿಎಸ್‌ಒ ನೇತೃತ್ವದಲ್ಲಿ ವಿದ್ಯಾರ್ಥಿಗಳು ಹಾಗು ಪೋಷಕರು ಶನಿವಾರ ಪ್ರತಿಭಟನೆ ನಡೆಸಿದರು.




ಸಂಘಟನೆಯ ಜಿಲ್ಲಾ ಸಂಚಾಲಕಿ ಚೈತ್ರ ಮಾತನಾಡಿ, ಸರ್ಕಾರ ಕೆಪಿಎಸ್ ಮ್ಯಾಗ್ನೆಟ್ ಹೆಸರಿನಲ್ಲಿ ಗ್ರಾಮ ಪಂಚಾಯಿತಿ ಗೊಂದು ಸರ್ಕಾರಿ ಶಾಲೆ ಮಾಡುತ್ತೇವೆ ಎಂದು ಹೇಳಿ 40 ಸಾವಿರಕ್ಕಿಂತ ಹೆಚ್ಚು ಸರ್ಕಾರಿ ಶಾಲೆಗಳನ್ನು ವಿಲೀನದ ಹೆಸರಿನಲ್ಲಿ ಮುಚ್ಚಲು ಹೊರಟಿದೆ. ಹಾಸನದಲ್ಲೂ ಕೂಡ 1942 ಸರ್ಕಾರಿ ಶಾಲೆಗಳು ಈ ಯೋಜನೆಯಡಿಯಲ್ಲಿ ಮುಚ್ಚಿ ಹೋಗುತ್ತವೆ. ಅದರಲ್ಲಿ ಈ ರಾಜಘಟ್ಟ ಶಾಲೆ ಕೂಡ ಎಂದು ಹೇಳಿದರು.

ಈ ಶಾಲೆಯಲ್ಲಿ ನೂರಾರು ಮಕ್ಕಳು ಶಿಕ್ಷಣ ಪಡೆದುಕೊಂಡಿದ್ದಾರೆ, 2-3 ವರ್ಷಗಳ ಹಿಂದೆ 20 ಇದ್ದ ಮಕ್ಕಳ ಸಂಖ್ಯೆ ಈಗ 41 ತಲುಪಿದೆ. ಅಷ್ಟು ಮಕ್ಕಳು ಇಲ್ಲಿ ಶಿಕ್ಷಣ ಪಡೆದುಕೊಳ್ಳುತ್ತಿದ್ದಾರೆ. ಊರಿನ ಗ್ರಾಮಸ್ಥರು ಹಾಗು ನೆರೆಯವರು ಸೇರಿ ಶಾಲೆಗೆ ಬಹಳಷ್ಟು ಸಹಾಯ ನೀಡಿ ಅದನ್ನು ಒಂದು ಮಟ್ಟಿಗೆ ಅಭಿವೃದ್ಧಿಪಡಿಸಿದ್ದಾರೆ. ಅಲ್ಲಿ ಶಿಕ್ಷಣ ಪಡೆಯುತ್ತಿರುವವರೆಲ್ಲರೂ ಕೂಡ ಬಡ ರೈತರ ಕೂಲಿ ಕಾರ್ಮಿಕರ, ವಲಸೆ ಕಾರ್ಮಿಕರ ಮಕ್ಕಳು, ಆ ಊರಿನಲ್ಲಿರುವ ಸರ್ಕಾರಿ ಶಾಲೆಯೇ ಅವರೆಲ್ಲರಿಗೂ ಪ್ರಾಥಮಿಕ ಶಿಕ್ಷಣದ ಆಸರೆ, ಆದರೆ ಅದೇ ಶಾಲೆ ಇಂದು ಕೆಪಿಎಸ್- ಮ್ಯಾಗ್ನೆಟ್ ಹೆಸರಿನಲ್ಲಿ 5 ಕಿ.ಮೀ ಗಿಂತಲೂ ದೂರ ಇರುವ ಬೂವನಹಳ್ಳಿ ಶಾಲೆಗೆ ವಿಲೀನವಾಗುವ ಕಾರಣ, ಎಷ್ಟೋ ಪೋಷಕರು ತಮ್ಮ ಮಕ್ಕಳನ್ನು ದೂರದೂರಿಗೆ ಕಳುಹಿಸಲು ಆತಂಕದಲ್ಲಿದ್ದಾರೆ ಎಂದು ಹೇಳಿದರು.

ಶಿಕ್ಷಣ ಸಾರ್ವತ್ರಿಕವಾಗಿರಬೇಕು. ಶಿಕ್ಷಣದಿಂದ ಮಾತ್ರವೇ ಮನುಷ್ಯರು ವಿಮರ್ಶಾತ್ಮಕ ಧೋರಣೆ ಮತ್ತು ಆತ್ಮಸಮ್ಮಾನ ಹೊಂದಲು ಸಾಧ್ಯ ಎಂಬುದನ್ನು ಜ್ಯೋತಿ ಬಾಫೂಲೆ ನಂಬಿದ್ದರು. ಆದರೆ ಇಂದಿನ ಸರ್ಕಾರಗಳು ನಮ್ಮ ಎಲ್ಲಾ ಮಹನೀಯರ ಆಸೆಗಳನ್ನು ಗಾಳಿಗೆ ತೂರಿ ಇಂದು ವಿವಿಧ ಹೆಸರುಗಳ ಅಡಿಯಲ್ಲಿ ಸರ್ಕಾರಿ ಶಾಲೆಗಳನ್ನು ಮುಚ್ಚಲು ಮುಂದಾಗಿವೆ ಎಂದು ದೂರಿದರು.

ರಾಜ್ಯ ಉಪಾಧ್ಯಕ್ಷೆ ಚಂದ್ರಕಲಾ, ಜಿಲ್ಲಾ ಸಹ ಸಂಚಾಲಕರಾದ ಸುಷ್ಮಾ, ಕಾರ್ಯಕರ್ತರಾದ ರಂಗನಾಥ್, ತರುಣ್, ರಾಜಘಟ್ಟದ ಗ್ರಾಮಸ್ಥರಾದ ಧರ್ಮಪಾಲ, ಪುರುಷೋತ್ತಮ್, ರಮೇಶ್, ಗಂಗಾಧರ್, ಕಮಲಮ್ಮ, ಗಿರೀಶ, ಸಿಬ್ಬಂದಿಗಳು ಹಾಗೂ ವಿದ್ಯಾರ್ಥಿಗಳು ಹಾಜರಿದ್ದರು.

# ದೇಶದ ಅಭಿವೃದ್ಧಿಯಲ್ಲಿ ಕಾರ್ಮಿಕರೇ ನಿರ್ಣಾಯಕ

## ಶಾಸಕ ಸಿಮೆಂಟ್ ಮಂಜು | ನೊಂದಾಯಿತ ಫಲಾನುಭವಿಗಳಿಗೆ ಸುರಕ್ಷತಾ ಕಿಟ್ ವಿತರಣೆ

• ಪ್ರಜೋದಯ ವರದಿ

**ಸಕಲೇಶಪುರ:** ಜಗತ್ತು ಭಾರತದ ಕಡೆಗೆ ನೋಡಲು ಕಟ್ಟಡ ಕಾರ್ಮಿಕರೇ ಕಾರಣ ಎಂದು ಸಿಮೆಂಟ್ ಮಂಜು ಹೇಳಿದರು



ಪಟ್ಟಣದ ಪುರಭವನದಲ್ಲಿ ಆಯೋಜಿಸಿದ್ದ ಬ್ರಿಡ್ಜ್ ಕೋರ್ಸ್ ತರಬೇತಿ ಕಾರ್ಯಕ್ರಮ ಹಾಗೂ ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯಲ್ಲಿ ನೋಂದಾಯಿತ ಫಲಾನುಭವಿಗಳಿಗೆ ಸುರಕ್ಷತಾ ಕಿಟ್ ವಿತರಣೆ ನೆರವೇರಿಸಿ ಅವರು ಮಾತನಾಡಿದರು.

ದೇಶದ ಆರ್ಥಿಕ ಅಭಿವೃದ್ಧಿಯಲ್ಲಿ ಕಾರ್ಮಿಕರ ಶ್ರಮ ನಿರ್ಣಾಯಕ ಪಾತ್ರ ವಹಿಸುತ್ತದೆ. ಇವರ ಹಿತಾಸಕ್ತಿಗಾಗಿ ಹಲವು ಕಾನೂನುಗಳನ್ನು ಜಾರಿಗೊಳಿಸಲಾಗಿದ್ದು, ಕರ್ತವ್ಯ ನಿರ್ವಹಣೆ ವೇಳೆ ಸಂಭವಿಸಬಹುದಾದ ಅವಘಡಗಳು, ಉದ್ಯೋಗ ಭದ್ರತೆ ಹಾಗೂ ವಿವಿಧ ಕಲ್ಯಾಣ ಕ್ರಮಗಳಲ್ಲಿ ಈ ಕಾನೂನುಗಳು ಕಾರ್ಮಿಕರಿಗೆ ರಕ್ಷಾಕವಚವಾಗಿವೆ ಎಂದು ಅವರು ಹೇಳಿದರು.

ಸರ್ಕಾರಗಳು ಕಾರ್ಮಿಕರ ಹಿತ ದೃಷ್ಟಿಯಿಂದ ಪಿಂಚಣಿ, ಟೂಲ್ ಕಿಟ್, ಮಹಿಳೆಯರಿಗೆ ಹೆರಿಗೆ ಸೌಲಭ್ಯ, ವಿವಾಹ ಮತ್ತು ಅಂತ್ಯಕ್ರಿಯೆ ವೆಚ್ಚ, ಶೈಕ್ಷಣಿಕ ಮತ್ತು ವೈದ್ಯಕೀಯ ಸಹಾಯಧನ, ಅಪಘಾತ ಪರಿಹಾರ ಸೇರಿದಂತೆ ಅನೇಕ ಯೋಜನೆಗಳನ್ನು ಜಾರಿಗೊಳಿಸಿದೆ. ಅಸಂಘಟಿತ ಕಾರ್ಮಿಕರು ತಮ್ಮ ಹಕ್ಕುಗಳನ್ನು ಅರಿತು, ಸರ್ಕಾರ ಜಾರಿಗೊಳಿಸಿರುವ ಯೋಜನೆಗಳ ಪ್ರಯೋಜನವನ್ನು ಪಡೆಯಬೇಕು ಎಂದು ಕಿವಿಮಾತು ನೀಡಿದರು.

ಆರೋಗ್ಯ, ಮದುವೆ, ಹೆರಿಗೆ, ಮಕ್ಕಳ ಶಿಕ್ಷಣ ಹಾಗೂ ವೈದ್ಯಕೀಯ ನೆರವು ಸೇರಿದಂತೆ ಎಲ್ಲಾ ಹಂತದಲ್ಲೂ ಸರ್ಕಾರ ಕಾರ್ಮಿಕರ ಬೆನ್ನಿಗೆ ನಿಂತಿದೆ. ಕಟ್ಟಡ ಕಾರ್ಮಿಕರು ಶ್ರಮಜೀವಿಗಳಾಗಿದ್ದು, ತಮ್ಮ ಮಕ್ಕಳಿಗೆ ಉತ್ತಮ ಶಿಕ್ಷಣ ಒದಗಿಸುವ ಮೂಲಕ ಸಮಾಜದ ಮುಖ್ಯವಾಹಿನಿಗೆ ತರಬೇಕು. ''ಶಿಕ್ಷಣವೇ ಅವರ ನಿಜವಾದ ಸಂಪತ್ತು'' ಎಂದು ಹೇಳಿದರು. ಕಾರ್ಮಿಕರು ದುಶ್ಚಟಗಳಿಗೆ ಬಲಿಯಾಗದೆ, ಆರೋಗ್ಯ ಕಾಪಾಡಿಕೊಳ್ಳುವಂತೆ ಅವರು ಸಲಹೆ ನೀಡಿದರು.

ಜಿಲ್ಲಾ ಕಾರ್ಮಿಕಾಧಿಕಾರಿ ಯಮುನಾ ರಾಜ್ಯ ಹಾಗೂ ಕೇಂದ್ರ ಸರ್ಕಾರಗಳಿಂದ ದೊರಕುವ ಸೌಲಭ್ಯಗಳ ಕುರಿತು ಮಾಹಿತಿ ನೀಡಿದರು.

ಅನಿಕೇತನ ಸಂಸ್ಥೆಯ ಮುಖ್ಯಸ್ಥ ಕಾರ್ತೀಕ್, ಆಲೂರು ಹಿರಿಯ ಕಾರ್ಮಿಕ ನಿರೀಕ್ಷಕ ಆನಂದ್‌ರಾಮ್, ತಾಲ್ಲೂಕು ಹಿರಿಯ ಕಾರ್ಮಿಕ ನಿರೀಕ್ಷಕ ರಘು, ಇಲಾಖೆಯ ಜಯರಾಮ್ ಉಪಸ್ಥಿತರಿದ್ದರು.

# ಅನ್ಯಭಾಷೆ ತೋರಿಕೆ ಪ್ರವೃತ್ತಿಯಿಂದ ಕನ್ನಡ ಸಂಸ್ಕೃತಿ ನಾಶ

• ಪ್ರಜೋದಯ ವರದಿ

**ಸಕಲೇಶಪುರ:** ಕನ್ನಡಿಗರು ಕನ್ನಡ ಭಾಷೆ ಬಳಕೆಗೆ ಯಾವುದೇ ಸ್ಥಳದಲ್ಲೂ ಹಿಂಜರಿಕೆ ಮನೋಭಾವ ತೋರಬಾರದು. ಅನ್ಯಭಾಷೆ ಬಳಕೆಯ ತೋರಿಕೆ ಪ್ರವೃತ್ತಿ ನಮ್ಮ ಸಂಸ್ಕೃತಿಯ ವಿನಾಶಕ್ಕೆ ಕಾರಣವಾಗುತ್ತದೆ ಎಂದು ಅಖಿಲ ಭಾರತೀಯ ಕನ್ನಡ ಸಾಹಿತ್ಯ ಪರಿಷದ್ ತಾಲ್ಲೂಕು ಅಧ್ಯಕ್ಷ ಅಣ್ಣಪ್ಪಸ್ವಾಮಿ ಅವರು ಹೇಳಿದರು.

ತಾಲ್ಲೂಕಿನ ಹೆತ್ತೂರು ಗ್ರಾಮದ ಮೂರಾರ್ಜಿ ದೇಸಾಯಿ ವಸತಿ ಶಾಲಾ ಆವರಣದದಲ್ಲಿ ಶನಿವಾರ ಕನ್ನಡ ಸಾಹಿತ್ಯ ಪರಿಷತ್ ಹೆತ್ತೂರು ಹೋಬಳಿ ಘಟಕದಿಂದ ಆಯೋಜಿಸಿದ್ದ 70ನೇ ಕನ್ನಡ ರಾಜ್ಯೋತ್ಸವ ಹಾಗೂ ನಾಡಗೀತೆಯ 100ರ ಸಂಭ್ರಮಾಚರಣೆ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಪ್ರಾಚೀನ ಕಾಲದಿಂದಲೂ ಕನ್ನಡ ಭಾಷೆ ಮತ್ತು ಸಂಸ್ಕೃತಿ ಇಡೀ ವಿಶ್ವದಲ್ಲೇ ವಿಶೇಷತೆ ಉಳಿಸಿಕೊಂಡು ಬಂದಿದೆ. ಆಂಗ್ಲಭಾಷಾ ವ್ಯಾಮೋಹಕ್ಕೆ ಒಳಗಾಗಿ ಮಾತೃ ಭಾಷೆ ತಾತ್ಸಾರ ಸಲ್ಲದು ಎಂದರು.

ಪ್ರಾಥಮಿಕ, ಪ್ರೌಢಶಾಲಾ ವಿದ್ಯಾರ್ಥಿಗಳಿಗೆ, ಭಾವಗೀತೆ, ಚಿತ್ರಕಲೆ, ಕನ್ನಡಕ್ಕೆ ಸಬಂಧಿಸಿದ ಪ್ರಬಂಧ, ರಸಪ್ರಶ್ನೆ ಸ್ಪರ್ಧೆ ಆಯೋಜಿಸಲಾಗಿತ್ತು. ಹೋಬಳಿಯ 10 ಶಾಲೆಗಳ ವಿದ್ಯಾರ್ಥಿಗಳು ಭಾಗವಹಿಸಿದರು, ತೀರ್ಪುಗಾರರಾಗಿ ಶಿಕ್ಷಕರಾದ ರೂಪ ಗೋಪಾಲ, ಅಭಿಷೇಕ ಅವರು ಕಾರ್ಯಕ್ರಮ ನಿರ್ವಹಿಸಿದರು.

ಮೊರಾರ್ಜಿ ದೇಸಾಯಿ ಶಾಲೆಯ ಪ್ರಾಂಶುಪಾಲ ಲೋಕನಾಯ್ಕ, ನಿವೃತ್ತ ಮುಖ್ಯ ಶಿಕ್ಷಕ ಸತ್ಯಮೂರ್ತಿ, ಕೃಷಿ ಪತ್ತಿನ ಸಹಕಾರ ಸಂಘದ ಉಪಾಧ್ಯಕ್ಷೆ ನೇತ್ರ ಸುರೇಶ್, ತಾಲ್ಲೂಕು ಕಸಾಪ ಕಾರ್ಯದರ್ಶಿ ಯೋಗೇಶ್, ಪದಾಧಿಕಾರಿ ಅಕ್ಬರ್ ಜುನೇದ್, ಕಸಾಪ ಹೋಬಳಿ ಘಟ್ಟಕ ಅಧ್ಯಕ್ಷ ಎಹೆ.ಪಿ.ರವಿಕುಮಾರ್, ಕಾರ್ಯದರ್ಶಿ ಸುರೇಶ್ ಅತ್ತಿಗನಹಳ್ಳಿ, ರೇಷ್ಮೆ ರಾಮಚಂದ್ರ ಮತ್ತಿತರರು ಹಾಜರಿದ್ದರು.



# ಮಾರ್ಗಸೂಚಿ ಫಲಕಗಳಿಂದ ಪ್ರವಾಸಿಗರಿಗೆ ಅನುಕೂಲ

• ಪ್ರಜೋದಯ ವರದಿ

**ಚನ್ನರಾಯಪಟ್ಟಣ:** ಐತಿಹಾಸಿಕ ತಾಣದಲ್ಲಿರುವ ಶ್ರೀ ಲಕ್ಷ್ಮಿನರಸಿಂಹ ಸ್ವಾಮಿ ಹಾಗೂ ಶ್ರೀ ಸದಾಶಿವಸ್ವಾಮಿ ದೇವಾಲಯಕ್ಕೆ ಆಗಮಿಸುವ ಪ್ರವಾಸಿಗರ ಅನುಕೂಲಕ್ಕಾಗಿ ಗ್ರಾಮ ಪಂಚಾಯಿತಿ ವತಿಯಿಂದ ನಾಮಫಲಕವನ್ನು ಅಳವಡಿಸಲಾಗಿದೆ ಎಂದು ಶಾಸಕ ಸಿ.ಎನ್.ಬಾಲಕೃಷ್ಣ ಹೇಳಿದರು.



ತಾಲ್ಲೂಕಿನ ನುಗ್ಗೆಹಳ್ಳಿ ಗ್ರಾಮದಲ್ಲಿ ಗ್ರಾಪಂ ವತಿಯಿಂದ ಪ್ರಮುಖ 3 ರಸ್ತೆಗಳಲ್ಲಿ ಅಳವಡಿಸಲಾಗಿದ್ದ ನಾಮಫಲಕ ಅನಾವರಣಗೊಳಿಸಿ ಮಾತನಾಡಿದ ಅವರು, ಗ್ರಾಮದಲ್ಲಿರುವ ಶ್ರೀ ಲಕ್ಷ್ಮಿನರಸಿಂಹಸ್ವಾಮಿ ಹಾಗೂ ಶ್ರೀ ಸದಾಶಿವಸ್ವಾಮಿ ದೇವಾಲಯಗಳು ಹೊಯ್ಸಳರ ಶಿಲ್ಪಕಲೆಗಳನ್ನು ಹೊಂದಿವೆ. ಈ ಹಿನ್ನೆಲೆಯಲ್ಲಿ ಬೆಂಗಳೂರು ಸೇರಿದಂತೆ ಹೊರ ರಾಜ್ಯಗಳಿಂದಲೂ ದಿನನಿತ್ಯ ನೂರಾರು ಪ್ರವಾಸಿಗರು ಹಾಗೂ ಭಕ್ತರು ದೇವಾಲಯಕ್ಕೆ ಆಗಮಿಸುತ್ತಾರೆ ಎಂದರು.

ಇದುವರೆಗೂ ದೇವಾಲಯ ಮಾರ್ಗ ಸೂಚಿಸುವ ನಾಮಫಲಕ ಇರಲಿಲ್ಲ. ಭಕ್ತರಿಗೆ ಅನುಕೂಲವಾಗುವ ದೃಷ್ಟಿಯಿಂದ ಸ್ಥಳೀಯ ಗ್ರಾಮ ಪಂಚಾಯಿತಿ ವತಿಯಿಂದ ಹೊಸದಾಗಿ ನಾಮ ಫಲಕವನ್ನು ಅಳವಡಿಸಲಾಗಿದೆ. ಇದರಿಂದ ಮುಂಬರುವ ದಿನಗಳಲ್ಲಿ ಪ್ರವಾಸಿಗರು ಹಾಗೂ ಭಕ್ತರಿಗೆ ಅನುಕೂಲವಾಗಲಿದೆ ಎಂದು ತಿಳಿಸಿದರು.

ದೇವಾಲಯದ ನಾಮಫಲಕದ ಜೊತೆಗೆ ಜಿಲ್ಲಾ ಕೇಂದ್ರ ಹಾಗೂ ತಾಲ್ಲೂಕು ಕೇಂದ್ರಗಳ ಹೆಸರು ಮತ್ತು ಕಿಲೋಮೀಟರ್ ಅನ್ನು ನಾಮಫಲಕದಲ್ಲಿ ಅಳವಡಿಸಿರುವುದು ಈ ಭಾಗದಲ್ಲಿ ಓಡಾಡುವ ವಾಹನ ಸವಾರರಿಗೆ ಮಾಹಿತಿ ತಿಳಿಯಲಿದೆ ಎಂದರು.

ಶ್ರೀ ಲಕ್ಷ್ಮಿನರಸಿಂಹ ಸ್ವಾಮಿ ಮತ್ತು ಸದಾಶಿವ ಸ್ವಾಮಿ ದೇವಾಲಯಗಳ ಮಾರ್ಗದ ರಸ್ತೆ ಸಂಪೂರ್ಣ ಹಾಳಾಗಿದ್ದು ಈ ಬಗ್ಗೆ ಪ್ರವಾಸೋದ್ಯಮ ಇಲಾಖೆ ಸಚಿವರಿಗೆ ಮನವಿ ಮಾಡುವ ಮೂಲಕ ರಸ್ತೆ ಅಭಿವೃದ್ಧಿ ಜೊತೆಗೆ ಶೌಚಾಲಯ ಸೇರಿದಂತೆ ಇತರೆ ಮೂಲಭೂತ ಸೌಕರ್ಯ ಕಲ್ಪಿಸಲು ಹೆಚ್ಚಿನ ಅನುದಾನ ಬಿಡುಗಡೆ ಮಾಡುವಂತೆ ಒತ್ತಾಯಿಸಲಾಗುವುದು ಎಂದು ಭರವಸೆ ನೀಡಿದರು.

ಗ್ರಾಮ ಪಂಚಾಯಿತಿ ಅಧ್ಯಕ್ಷ ಹೊನ್ನೇಗೌಡ, ಉದ್ಯಮಿ ಅಣತಿ ಯೋಗೇಶ್, ಗ್ರಾಪಂ ಸದಸ್ಯರಾದ ನಟರಾಜ್ ಯಾದವ್, ಎನ್ ಎಸ್ ಮಂಜುನಾಥ, ಶಿವಕುಮಾರ್, ಮುಖಂಡ ರಾದ ದೊರೆಸ್ವಾಮಿ, ಮುರಳಿ, ಬಸವನಪುರ ಪ್ರಕಾಶ್, ಹುಲಿಕೆರೆ ಸಂಪತ್‌ಕುಮಾರ್, ಜೈ ಕೀರ್ತಿ, ಮಧು, ಚಂದ್ರು ಯಾದವ್, ಜೆಸಿಬಿ ಶೇಖರ್ ಇನ್ನಿತರರು ಹಾಜರಿದ್ದರು.

# ಡಿ.01 ರಂದು ವಿಶ್ವ ಏಡ್ಸ್ ದಿನಾಚರಣೆ

**ಹಾಸನ:** ಕರ್ನಾಟಕ ರಾಜ್ಯ ಏಡ್ಸ್ ಪ್ರಿವೆನ್ಷನ್ ಸೊಸೈಟಿ, ಬೆಂಗಳೂರು, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಹಾಸನ, ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಜಿಲ್ಲಾ ಏಡ್ಸ್ ನಿಯಂತ್ರಣ ಮತ್ತು ಪ್ರತಿಬಂಧಕ ಘಟಕ, ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಭಾರತೀಯ ರೆಡ್ ಕ್ರಾಸ್ ಸಂಸ್ಥೆ, ಜಿಲ್ಲಾ ಶಾಖೆ, ಲಯನ್ಸ್ ಕ್ಲಬ್, ರೋಟರಿ ಕ್ಲಬ್ ಹಾಸನ, ಸಮುದಾಯ ಆಧಾರಿತ ಸ್ವಯಂ ಸೇವಾ ಸಂಸ್ಥೆಗಳು, ಎನ್. ಎಸ್. ಎಸ್. ಘಟಕಗಳು ಮತ್ತು ರೆಡ್ ರಿಬ್ಬನ್ ಕ್ಲಬ್‌ಗಳ ಸಂಯುಕ್ತಾಶ್ರಯದಲ್ಲಿ ಡಿ.01 ರಂದು ವಿಶ್ವ ಏಡ್ಸ್ ದಿನದ ಅಂಗವಾಗಿ ಜಾಥಾ ಕಾರ್ಯಕ್ರಮವನ್ನು ಜಿಲ್ಲಾಧಿಕಾರಿಯವರ ಕಚೇರಿ ಆವರಣದಿಂದ ಜಾಥಾ ಕಾರ್ಯಕ್ರಮ ಪ್ರಾರಂಭವಾಗಲಿದೆ. ನಂತರ ಬೆಳಿಗ್ಗೆ 11 ಗಂಟೆಗೆ ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯಲ್ಲಿ ವೇದಿಕೆ ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ.

ಜಿಲ್ಲಾಧಿಕಾರಿ ಲತಾಕುಮಾರಿ ಅವರು ಜಾಥಾ ಕಾರ್ಯಕ್ರಮವನ್ನು ಉದ್ಘಾಟನೆ ಮಾಡಲಿದ್ದಾರೆ.

# ಬಾಹ್ಯಕಾಶ ಸಂಶೋಧನೆಯಲ್ಲಿ ಕನ್ನಡಿಗ ವಿಜ್ಞಾನಿಗಳ ಕೊಡುಗೆ ಅಪಾರ

• ಪ್ರಜೋದಯ ವರದಿ

**ಹಾಸನ:** ಹಾಸನ ಜಿಲ್ಲೆ ಭೌಗೋಳಿಕವಾಗಿ ತಟಸ್ಥ ಪ್ರದೇಶವಾಗಿರುವುದಕ್ಕೆ ಎಂಸಿಎಫ್ ಕೂಡ ಇದೇ ಜಿಲ್ಲೆಯಲ್ಲಿ ಸ್ಥಾಪನೆಯಾಗಿದೆ ಎಂದು ಯು.ಆರ್.ಎಸ್.ಸಿ ಉಪ ನಿರ್ದೇಶಕರು ಹಾಗೂ ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆಯ (ಇಸ್ರೋ) ವಿಜ್ಞಾನಿಗಳಾದ ಡಾ. ಎಸ್. ವೆಂಕಟೇಶ್ವರ ಶರ್ಮಾಜಿ ಅವರು ತಿಳಿಸಿದ್ದಾರೆ.



ಮೊಸಳೆ ಹೊಸಳ್ಳಿಯ ಸರ್ಕಾರಿ ಇಂಜಿನಿಯರಿಂಗ್ ಕಾಲೇಜಿನಲ್ಲಿ ಕನ್ನಡ ಸಂಘದ ವತಿಯಿಂದ 2025ನೇ ವರ್ಷದ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಚಂದ್ರನಲ್ಲಿರುವ ನೀರಿನ ಸುಳಿವು ಮೊದಲು ಪತ್ತೆ ಹಚ್ಚಿದವರಲ್ಲಿ ಭಾರತೀಯರ ಪಾತ್ರ ಅತ್ಯಂತ ಮಹತ್ವದ್ದಾಗಿದೆ ಎಂದು ಬಾಹ್ಯಕಾಶ ಸಂಶೋಧನೆಯಲ್ಲಿ ಕನ್ನಡಿಗ ವಿಜ್ಞಾನಿಗಳಾದ ಯು.ಆರ್.ರಾವ್ ಮುಂತಾದವರ ಕೊಡುಗೆ ಅಪಾರ ಎಂದು ಹೇಳಿದರಲ್ಲದೆ, ಕನ್ನಡ ನಾಡಿಗೆ ಕೀರ್ತಿ ತರುವ ಜವಾಬ್ದಾರಿ ವಿದ್ಯಾರ್ಥಿಗಳದ್ದಾಗಿದೆ ಎಂದರು.

ಪ್ರಾಂಶುಪಾಲರಾದ ಡಾ.ಟಿ.ರಂಗಸ್ವಾಮಿ ಅವರು ಮಾತನಾಡಿ, ನಮ್ಮ ತಾಂತ್ರಿಕ ವಿದ್ಯಾಲಯದದಲ್ಲಿ ಕನ್ನಡ ರಾಜ್ಯೋತ್ಸವವನ್ನು ಪ್ರತಿವರ್ಷವೂ ಅದ್ದೂರಿಯಾಗಿ ಆಚರಿಸುವುದು ಹೆಮ್ಮೆಯ ವಿಷಯ. ಕನ್ನಡ ಸಂಘವು ನಡೆಸುವ ಪ್ರತಿಯೊಂದು ಕಾರ್ಯಕ್ರಮವೂ ವಿದ್ಯಾರ್ಥಿಗಳಲ್ಲಿ ಕನ್ನಡ ಪ್ರೀತಿಯನ್ನು ಉತ್ತೇಜಿಸುತ್ತದೆ ಎಂದು ಹೇಳಿದರು.

ಹಾಸನದ ಹಲವು ಕವಿಗಳು, ಸಾಹಿತ್ಯಕಾರರು ಮತ್ತು ವಿವಿಧ ಕ್ಷೇತ್ರಗಳಲ್ಲಿ ಸಾಧನೆಗೈದ ಗಣ್ಯರನ್ನು ಸ್ಮರಿಸಿ, ಕೃತಜ್ಞತೆ ಸಲ್ಲಿಸಿದರು.

ಕನ್ನಡ ಸಂಘದ ಸಂಯೋಜಕರಾದ ಡಾ. ಟಿ.ಎಸ್.ಮಹೇಶ್, ಡಾ.ರಘು ಎಂ.ಇ., ಕನ್ನಡ ಸಂಘದ ಪದಾಧಿಕಾರಿಗಳು, ಸದಸ್ಯರು, ಅಧ್ಯಾಪಕರು, ಸಿಬ್ಬಂದಿ ವರ್ಗ ಮತ್ತು ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

# ವಿದ್ಯಾರ್ಥಿಗಳಲ್ಲಿನ ಪ್ರತಿಭೆ ಗುರುತಿಸಿ ಪ್ರೋತ್ಸಾಹಿಸಿ

• ಪ್ರಜೋದಯ ವರದಿ

**ಅರಸೀಕೆರೆ:** ವಿದ್ಯಾರ್ಥಿಗಳ ವಿದ್ಯಾಭ್ಯಾಸಕ್ಕೆ ಒತ್ತು ನೀಡಿದರೆ ಸಾಲದು ಅವರಲ್ಲಿ ಅಡಗಿರುವ ಪ್ರತಿಭೆಯನ್ನು ಗುರುತಿಸಿ ಪ್ರೋತ್ಸಾಹಿಸುವ ಕೆಲಸ ಪೋಷಕರು ಅಧ್ಯಾಪಕರು ಮಾತ್ರವಲ್ಲ ಸಮಾಜದ್ದಾಗಿರುತ್ತದೆ ಎಂದು ಶ್ರೀ ಆದಿಚುಂಚನಗಿರಿ ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲ ಡಾ. ಲಿಂಗರಾಜು ಅವರುಹೇಳಿದರು.



ತಾಲ್ಲೂಕು ಮಟ್ಟದ ಪ್ರೌಢಶಾಲೆ ವಿಭಾಗದ ಪ್ರತಿಭಾ ಕಾರಂಜಿ ಕಲೋತ್ಸವ 2025-26ರಲ್ಲಿ ಪಾಲ್ಗೊಂಡು ಭಾವಗೀತೆ, ಕವ್ವಾಲಿ, ಪ್ರಸ್ತುತಪಡಿಸಿ ಪ್ರಥಮ ಸ್ಥಾನ ಗಳಿಸುವುದರೊಂದಿಗೆ ಶಾಲೆಗೆ ಕೀರ್ತಿ ತಂದಿದ್ದ ವಿದ್ಯಾರ್ಥಿಗಳಿಗೆ ಅಭಿನಂದಿಸಿ ಮಾತನಾಡಿದರು.

ಪಠ್ಯಪುಸ್ತಕದ ಕಲಿಯುವ ವಿದ್ಯೆ ನಮ್ಮ ಜ್ಞಾನಾರ್ಜನೆಯನ್ನು ಹೆಚ್ಚಿಸಿದರೆ ಪಠ್ಯೇತರ ಚಟುವಟಿಕೆಗಳಲ್ಲಿ ಇರುವ ಆಸಕ್ತಿ ನಮ್ಮ ಬದುಕನ್ನು ವಿಕಸನಗೊಳಿಸುತ್ತದೆ. ಕಲೆ ಸಾಹಿತ್ಯ ಸಂಗೀತ ಜ್ಞಾನ ವಿಜ್ಞಾನ ಅಥವಾ ಉತ್ತಮ ಕ್ರೀಡಪಟು ಯಾವುದೇ ಆಗಿರಲಿ ಸೂಕ್ತ ಮಾರ್ಗದರ್ಶನದೊಂದಿಗೆ ನಿರಂತರ ಅಭ್ಯಾಸ ಮಾಡುವುದರಿಂದ ತಮ್ಮ ಇಷ್ಟಾನುಕ್ಷೇತ್ರದಲ್ಲಿ ಉತ್ತಮ ಸಾಧನೆ ಮಾಡಲು ಸಾಧ್ಯವಾಗಲಿದೆ ಎಂದು ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು.

ಆದಿಚುಂಚನಗಿರಿ ಶಾಲಾ ಕಾಲೇಜುಗಳಲ್ಲಿ ವಿದ್ಯಾಭ್ಯಾಸ ಮಾಡುವ ವಿದ್ಯಾರ್ಥಿಗಳಿಗೆ ಪಠ್ಯಪುಸ್ತಕದ ಶಿಕ್ಷಣ ಮಾತ್ರ ದೊರೆಯುವುದಿಲ್ಲ, ಪಠ್ಯೇತರ ಚಟುವಟಿಕೆಗಳಲ್ಲಿ ವಿದ್ಯಾರ್ಥಿಗಳಿಗೆ ಇರುವ ಆಸಕ್ತಿಯನ್ನು ಗುರುತಿಸಿ ಪ್ರೋತ್ಸಾಹಿಸುವುದು ಜೊತೆಗೆ ವೇದಿಕೆ ಒದಗಿಸಿಕೊಡುವ ಕೆಲಸ ಕೂಡ ಮಾಡುವುದರಿಂದ ನಮ್ಮ ಶಾಲಾ ಕಾಲೇಜುಗಳಲ್ಲಿ ವಿದ್ಯಾಭ್ಯಾಸ ಮಾಡಿದ ಮಕ್ಕಳು ಇಂದು ನಾನಾ ಕ್ಷೇತ್ರಗಳಲ್ಲಿ ಉತ್ತಮ ಹೆಸರು ಮಾಡುತ್ತಿರುವುದು ಸಂತಸ ವಿಷಯವಾಗಿದೆ ಎಂದರು,

ವಿದ್ಯಾರ್ಥಿಗಳ ಈ ಸಾಧನೆಗೆ ಸಂಸ್ಥೆಯ ಕಾರ್ಯದರ್ಶಿಗಳು ಆದ ಹಾಸನ ಆದಿಚುಂಚನಗಿರಿ ಮಹಾ ಸಂಸ್ಥಾನ ಮಠದ ಶಂಭುನಾಥ ಸ್ವಾಮೀಜಿಯವರ ಸಹ ಶುಭ ಹಾರೈಸಿದ್ದಾರೆ ಎಂದು ತಿಳಿಸಿದರು.

ಪ್ರಶಸ್ತಿಗೆ ಭಾಜನರಾದ ವಿದ್ಯಾರ್ಥಿಗಳಾದ ಸ್ವರ್ಣಗೌರಿ, ರಾಬಿಯಾ, ಮಿನ್ಹಾಜ್, ಸಯೀದ್ ಸಾಫಿಯಾ, ಆಫಿಯಾ, ಉಸ್ಮಾ, ಸಯೀದ್ ಝೈನಬ್ ರನ್ನು ಸನ್ಮಾನಿಸಿ ಗೌರವಿಸಲಾಯಿತು.

ಜಾಹಿರಾತಿಗಾಗಿ ಸಂಪರ್ಕಿಸಿ
8747042279

ಮಾರಾಟಕ್ಕಿದೆ
ಇದೇ ಹಾಸನದ NH 75 ರ ಬೈಪಾಸ್ ರಸ್ತೆ, ಬೊಮ್ಮನಾಯಕನ ಹಳ್ಳಿ ಬಡಾವಣೆಯಲ್ಲಿ 20'0NSx30'0 EW ನಿವೇಶನದಲ್ಲಿ 3 ಅಂತಸ್ತುವುಳ್ಳ 1800 ಚದುರ ಅಡಿ ಹೊಸ ಮನೆ ಮಾರಾಟಕ್ಕಿದೆ.
ಆಸಕ್ತರು ಸಂಪರ್ಕಿಸಿ:
94481 26779
80883 49615

**ಕರ್ನಾಟಕ ರಾಜ್ಯ ತೆಂಗಿನ ನಾರಿನ ಅಭಿವೃದ್ಧಿ ನಿಗಮ ನಿಯಮಿತ**
ಕಲ್ಪಕೃತಿ
(ಕರ್ನಾಟಕ ಸರ್ಕಾರ ಉದ್ಯಮ)
ಎಸ್‌ಎಫ್-4 & ಎಸ್‌ಎಫ್-5, ಸ್ಟರ್ಲಿಂಗ್ ಟವರ್ಸ್, (ಗಾರ್ಮೆಂಟ್ ಕಾಂಪ್ಲೆಕ್ಸ್), ಕೆಎಸ್‌ಎಸ್‌ಐಡಿಸಿ ಕೈಗಾರಿಕಾ ವಸಾಹತು, ರಾಜಾಜಿನಗರ, 6ನೇ ಬ್ಲಾಕ್, ಬೆಂಗಳೂರು-560010. ದೂರವಾಣಿ ಸಂ. 080-23105866 / 23105865

**ತೆಂಗಿನ ಸಿಪ್ಪೆ, ತೆಂಗಿನ ನಾರು, ತೆಂಗಿನ ನಾರಿನ ಹುರಿ ಮತ್ತು ತೆಂಗಿನ ನಾರಿನ ಮ್ಯಾಟ್, ಸುರುಳಿ ಹಗ್ಗ, ಕಾಯರ್ ಪಿತ್ ಗೊಬ್ಬರ ಸರಬರಾಜಿಗೆ ಸರಬರಾಜುದಾರರಿಗೆ ಆಹ್ವಾನ** (ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ)

ಕರ್ನಾಟಕ ರಾಜ್ಯ ತೆಂಗಿನ ನಾರಿನ ಅಭಿವೃದ್ಧಿ ನಿಗಮದ ವಿವಿಧ ಘಟಕಗಳಿಗೆ ತೆಂಗಿನ ಸಿಪ್ಪೆ, ತೆಂಗಿನ ನಾರು, ತೆಂಗಿನ ನಾರಿನ ಹುರಿ ಮತ್ತು ತೆಂಗಿನ ನಾರಿನ ಉತ್ಪನ್ನ ಸರಬರಾಜಿಗಾಗಿ ಆಸಕ್ತಿಯುಳ್ಳ ತಯಾರಕರು/ ಸರಬರಾಜುದಾರರನ್ನು ಟೆಂಡರ್ ಮೂಲಕ ಆಹ್ವಾನಿಸಲಾಗಿದೆ.

(1) ಭರ್ತಿ ಮಾಡಿದ ಟೆಂಡರ್ ದಾಖಲಾತಿಯನ್ನು ಸಲ್ಲಿಸುವ ಕೊನೆಯ ದಿನಾಂಕ: **30.12.2025 ಸಂಜೆ 4.00 ಗಂಟೆಯೊಳಗೆ.** (2) ಟೆಂಡರ್ ತೆರೆಯುವ ದಿನಾಂಕ: **31.12.2025ರಂದು ಸಂಜೆ 5.00 ಗಂಟೆಗೆ. (3) ಸಂಪರ್ಕಿಸಬೇಕಾದವರು:** ಶ್ರೀ ರವಿಕುಮಾರ್, ಮುಖ್ಯ ವ್ಯವಸ್ಥಾಪಕರು (**ಮೊ.ಸಂ.9141943430**) / ಶ್ರೀ ಹೆಚ್.ಆರ್.ಬಸವರಾಜು, ವ್ಯವಸ್ಥಾಪಕರು-ಉತ್ಪಾದನೆ (**ಮೊ.ಸಂ.9449228749**).

ದಿನಾಂಕ: 29.11.2025 **ಸಹಿ/- ಮುಖ್ಯ ವ್ಯವಸ್ಥಾಪಕರು**

## ರೈತರಿಗೆ ಮತ್ತಷ್ಟು ಸಾಲ ನೀಡುವ ಮೂಲಕ ರೈತರ ಆರ್ಥಿಕತೆಯನ್ನು ಬಲಗೊಳಿಸಲಾಗುವುದು

# ಎ.ಚೋಳೇನಹಳ್ಳಿ ಪಿಎಸಿಸಿಎಸ್ ಅಧ್ಯಕ್ಷ ಮಧು

• ಪ್ರಜೋದಯ ವರದಿ

**ಚನ್ನರಾಯಪಟ್ಟಣ:** ತಾಲ್ಲೂಕಿನ ಎ.ಚೋಳೇನಹಳ್ಳಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ಸ್ಥಾನಕ್ಕೆ ಶನಿವಾರ ನಡೆದ ಚುನಾವಣೆಯಲ್ಲಿ ಅಡಗೂರು ಗ್ರಾಮದ ನಿರ್ದೇಶಕ ಜೆಡಿಎಸ್ ಬೆಂಬಲಿತರಾದ ಎ.ಎಂ.ಮಧು ಅವರು ಅಧ್ಯಕ್ಷರಾಗಿ ಅವಿರೋಧವಾಗಿ ಆಯ್ಕೆಯಾದರು.



ಎ.ಚೋಳೇನಹಳ್ಳಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಕ್ಕೆ ಈ ಹಿಂದೆ ಅಧ್ಯಕ್ಷರಾಗಿದ್ದ ಅಡಗೂರು ಗ್ರಾಮದ ಲಲಿತಾ ನಾರಾಯಣ್ ರವರು ತಮ್ಮ ಸ್ಥಾನಕ್ಕೆ ರಾಜಿನಾಮೆ ನೀಡಿದ ಹಿನ್ನಲೆಯಲ್ಲಿ ಸಹಕಾರ ಇಲಾಖೆಯೂ ಶನಿವಾರ ಚುನಾವಣೆ ನಿಗದಿಗೊಳಿಸಿತ್ತು. ಅಧ್ಯಕ್ಷ ಸ್ಥಾನಕ್ಕೆ ಅಡಗೂರು ಗ್ರಾಮದ ಎ.ಎಂ.ಮಧು ರವರು ನಾಮಪತ್ರ ಸಲ್ಲಿಸಿದರು. ಇವರನ್ನು ಹೊರತುಪಡಿಸಿ ಮತ್ಯಾರು ನಾಮಪತ್ರ ಸಲ್ಲಿಸದ ಕಾರಣ ಇವರ ಆಯ್ಕೆಯನ್ನು ಚುನಾವಣಾಧಿಕಾರಿಯಾಗಿದ್ದ ಸಹಕಾರ ಇಲಾಖೆ ಅಧಿಕಾರಿ ವಾಸಿಂ ಶರೀಫ್ ಘೋಷಿಸಿದರು.

ನೂತನ ಅಧ್ಯಕ್ಷ ರಾಜ್ಯ ಮಾರಾಟ ಮಹಾಮಂಡಳದ ನಿರ್ದೇಶಕ ಸಿ.ಎನ್.ಪುಟ್ಟಸ್ವಾಮಿಗೌಡ ಅಭಿನಂದಿಸಿ ಮಾತನಾಡಿ, ಕಳೆದ ಸಾಲಿನಲ್ಲಿ ಸೇವೆ ಸಲ್ಲಿಸಿದ ಅಧ್ಯಕ್ಷರುಗಳು ಸೊಸೈಟಿಯ ಅಭಿವೃದ್ಧಿಗೆ ಗಣನೀಯ ಸಾಧನೆ ಮಾಡಿದ್ದು, ಸಹಕಾರಿ ಸಂಸ್ಥೆಗಳು ಸಹಕಾರ ತತ್ವದಡಿ ಕಾರ್ಯ ನಿರ್ವಹಿಸಿದಾಗ ಸಹಕಾರ ಸಂಸ್ಥೆಗಳು ಉನ್ನತಿಕರಣಗೊಳ್ಳಲು ಸಾಧ್ಯ, ಸೊಸೈಟಿ ಆರ್ಥಿಕವಾಗಿ ಸದೃಢವಾಗಿ ಬೆಳೆದಿದ್ದು, ಸಂಘದಡಿ 7.85 ಕೋಟಿ ರೂ. ಕೆಸಿಸಿ ಸಾಲ ನೀಡಲಾಗಿದೆ, ಸ್ತ್ರೀಶಕ್ತಿ ಸಂಘಗಳಿಗೆ 67 ಲಕ್ಷ ರೂ. ಸಾಲ, 1.75 ಕೋಟಿ ರೂ. ಎಂಟಿಎಲ್ ಸಾಲ ನೀಡಲಾಗಿದೆ. ಚೋಳೇನಹಳ್ಳಿ ಸೊಸೈಟಿಯಿಂದ ಇಷ್ಟು ದೊಡ್ಡ ಮಟ್ಟದ ಸಾಲ ನೀಡಲು ಶಾಸಕ ಸಿ.ಎನ್.ಬಾಲಕೃಷ್ಣ ಅವರು 25 ವರ್ಷಗಳಿಂದ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್‌ನ ಅಧ್ಯಕ್ಷರಾಗಿ, ನಿರ್ದೇಶಕರಾಗಿ ಕಾರ್ಯ ನಿರ್ವಹಿಸುವುದು ನಮಗೆ ವರದಾನವಾಗಿದೆ. ಸಹಕಾರದ ತತ್ವದಲ್ಲಿ ಹುಟ್ಟಿಕೊಂಡ ಸಂಸ್ಥೆಗಳು ಅಧಿಕ ಲಾಭದ ನಿರೀಕ್ಷೆ ಹೊಂದಿರಬಾರದು. ನೂತನ ಆಡಳಿತ ಮಂಡಳಿ ಸಹಕಾರ ರಂಗದಲ್ಲಿ ಹೆಚ್ಚಿನ ಆಸಕ್ತಿ ವಹಿಸಿ ಕೃಷಿ ಉತ್ತೇಜನಕ್ಕೆ ಯೋಜನೆಗಳನ್ನು ರೂಪಿಸಬೇಕು. ಗ್ರಾಹಕರಿಗೆ, ರೈತರಿಗೆ ಹತ್ತಿರವಾಗಿ ಸೇವೆ ಸಲ್ಲಿಸುವಲ್ಲಿ ಮುಂದಾಗುವಂತೆ ತಿಳಿಸಿದರು.

ನೂತನ ಅಧ್ಯಕ್ಷ ಎ.ಎಂ.ಮಧು ಮಾತನಾಡಿ, ಚೋಳೇನಹಳ್ಳಿ ಕೃಷಿ ಪತ್ತಿನ ಸಹಕಾರ ಸಂಘಕ್ಕೆ ಹಿಂದೆ ಅಧ್ಯಕ್ಷರಾಗಿದ್ದವರೆಲ್ಲ ಸಂಘವನ್ನು ಅಭಿವೃದ್ಧಿಯತ್ತ ಮುನ್ನೆಡೆಸಿದ್ದಾರೆ. ಅವರೆಲ್ಲರ ಮಾರ್ಗದರ್ಶನ, ಸಲಹೆ ಪಡೆದು ಸಂಘವನ್ನು ನಡೆಸಿಕೊಂಡು ಹೋಗುವುದರ ಜೊತೆಗೆ ಬಾಲಕೃಷ್ಣ ರವರಿಂದ ಹೆಚ್ಚಿನ ಅನುದಾನ ತಂದು ರೈತರಿಗೆ ಮತ್ತಷ್ಟು ಸಾಲ ನೀಡುವ ಮೂಲಕ ರೈತರ ಅರ್ಥಿಕತೆಯನ್ನು ಬಲಗೊಳಿಸಲಾಗುವುದೆಂದರು.

ಸಂಘದ ಮಾಜಿ ಅಧ್ಯಕ್ಷರಾದ ಲಲಿತಾ ನಾರಾಯಣ್, ಉಪಾಧ್ಯಕ್ಷ ರವಿ, ನಿರ್ದೇಶಕರಗಳಾದ ಧರ್ಮೇಗೌಡ, ದಿನೇಶ್, ಅಂಬರೀಶ್, ಪ್ರತಿಭಾ ಮಧು, ಆಶಾರಾಣಿ ವೈ.ಎನ್. ಪ್ರದೀಪ್ ಕುಮಾರ್, ಧರ್ಮ, ಟಿಎಪಿಸಿಎಂಎಸ್‌ನ ನಿರ್ದೇಶಕ ಕುಂಬಾರಹಳ್ಳಿ ರಮೇಶ್, ಪುರಸಭಾ ಮಾಜಿ ಅಧ್ಯಕ್ಷ ಸಿ.ಎನ್.ಮೋಹನ್, ವಳಗೇರಹಳ್ಳಿ ರವಿ, ಎ.ಆರ್. ನಾರಾಯಣ್, ಎ.ಜಿ. ರಂಗಸ್ವಾಮಿ, ಕಾಳೇನಹಳ್ಳಿ ಶಂಭುಲಿಂಗೇಗೌಡ, ಗನ್ನಿ ವಾಸು, ಬೆಕ್ಕ ಮಹೇಂದ್ರ, ನಂಜುಂಡೇಗೌಡ, ಡಿ. ಕಾಳೇನಹಳ್ಳಿ ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷ ಚಂದ್ರಶೇಖರ್, ಮಾಜಿ ಉಪಾಧ್ಯಕ್ಷ ಪ್ರತಾಪ್, ಅಡಗೂರು ಡೈರಿ ಅಧ್ಯಕ್ಷ ನರಸಿಂಹ, ಕಾರ್ಯದರ್ಶಿ ಧರ್ಮ, ಗ್ರಾಮದ ಆನಂದ್, ರೋಹಿತ್, ಕಿಟ್ಟಿ, ಸಿ.ಎಂ. ರವಿ. ಸಿಬ್ಬಂದಿಗಳಾದ ಪ್ರಜ್ವಲ್, ಸುನಿತಾ, ಪವಿತ್ರ, ಉಮೇಶ್ ಇದ್ದರು.

**ಪುರಸಭಾ ಕಾರ್ಯಾಲಯ, ಚನ್ನರಾಯಪಟ್ಟಣ, ಹಾಸನ ಜಿಲ್ಲೆ.**
Email:itstaff_ulb_channarayapatna@yahoo.co.in, Phone:08176-255411
ನಂ:ಪು.ಸ.ಚ./ಕಿ.ಅ/ಟೆಂಡರ್/05/2025-26 ದಿನಾಂಕ: 28-11-2025

**"ಇ-ಪ್ರೊಕ್ಯೂರ್‌ಮೆಂಟ್ ಅಲ್ಪಾವಧಿ ಟೆಂಡರ್ ಪ್ರಕಟಣೆ"**

ಚನ್ನರಾಯಪಟ್ಟಣ ಪುರಸಭೆ ವ್ಯಾಪ್ತಿಯ 2021-22ನೇ ಸಾಲಿನ 15ನೇ ಹಣಕಾಸು ಎಂಪಿಸಿ ಉಳಿಕೆ ಅನುದಾನದ ಕೆಳಕಂಡ ಕಾಮಗಾರಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ 1999 ಮತ್ತು 2000 ನಿಯಮದಂತೆ, ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ, ಮತ್ತು ಇ-ಪ್ರೊಕೊರ್‌ಮೆಂಟ್ ಸೆಲ್, ಬೆಂಗಳೂರು ರವರಲ್ಲಿ ನೋಂದಾಯಿತ ಅರ್ಹ ಗುತ್ತಿಗೆದಾರರುಗಳಿಂದ ಆನ್‌ಲೈನ್ ಟೆಂಡರ್‌ಗಳನ್ನು ಆಹ್ವಾನಿಸಲಾಗಿದ್ದು, ಆಸಕ್ತ ಗುತ್ತಿಗೆದಾರರು ತಮ್ಮ ದರ ನಮೂದಿಸಿದ ಟೆಂಡರ್‌ಗಳನ್ನು ಇ-ಪ್ರೊಕೊರ್‌ಮೆಂಟ್ (Visit:https://kppp.karnataka.gov.in/) ಪೋರ್ಟಲ್ ಮೂಲಕ ಈ ಕೆಳಗೆ ನಿಗಧಿಪಡಿಸಿದ ದಿನಾಂಕಗಳಂದು ಆನ್‌ಲೈನ್‌ನಲ್ಲಿ ಸಲ್ಲಿಸತಕ್ಕದ್ದು. ಕಾಮಗಾರಿ ವಿವರ ಹಾಗೂ ಟೆಂಡರ್ ಪ್ರಕಟಣೆ ವಿವರಗಳನ್ನು ಪುರಸಭೆ ಚನ್ನರಾಯಪಟ್ಟಣ ಕಛೇರಿ ಸೂಚನಾ ಫಲಕದಲ್ಲಿ ಮತ್ತು ವೆಬ್ ಸೈಟ್ www.channarayapatnatown.mrc.gov.in ನಲ್ಲಿ ವೀಕ್ಷಿಸಬಹುದು. ಪುರಸಭೆಯ ಆರ್ಥಿಕ ಪರಿಸ್ಥಿತಿ ಅನುಗುಣವಾಗಿ ಬಿಲ್ ಪಾವತಿಸಲಾಗುವುದು. ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಟೆಂಡರ್ ಅಫ್‌ಲೋಡ್ ಮಾಡಲು ಕೊನೆಯ ದಿನಾಂಕ: 29-11-2025 to 06-12-2025 up to 17.30 hrs 1) ಟೆಂಡರ್‌ಗಳನ್ನು ತೆರೆಯುವ ದಿನಾಂಕ : 08-12-2025 at 11.00 hr 2) ಟೆಂಡರ್ ಫಾರಂ ಬೆಲೆ : : ಇ-ಪೋರ್ಟಲ್‌ನಲ್ಲಿರುವಂತೆ. ಕ್ರ.ಸಂ 1)-ಪೋರ್ಟಲ್‌ನಲ್ಲಿನ ಟೆಂಡರ್ ಇಂಡೆಂಟ್ ನಲ್ಲೂರು ಘನತ್ಯಾಜ್ಯ ವಸ್ತು ನಿರ್ವಹಣಾ ಘಟಕದಲ್ಲಿ ರೀಟೈನಿಂಗ್ ವಾಲ್ ನಿರ್ಮಾಣ ಕಾಮಗಾರಿ. DMA/2025- 26/OW/WORK_INDENT51394 ಟೆಂಡರ್ ಮೊತ್ತ (ರೂ ಲಕ್ಷಗಳಲ್ಲಿ)6.64 ಇಎಂಡಿ ಮೊತ್ತ (ರೂಗಳಲ್ಲಿ)16650/- ಕಾಲಾವದಿ 3 ತಿಂಗಳು ಗುತ್ತಿಗೆದಾರರ ದರ್ಜೆ 3ನೇ ದರ್ಜೆ ಮತ್ತು ಮೇಲ್ಪಟು

ಸಹಿ/- ಮುಖ್ಯಾಧಿಕಾರಿ
ಪುರಸಭೆ, ಚನ್ನರಾಯಪಟ್ಟಣ

ವಾಸಾಸಂಇ/ಹಿಸನಿ/ಹಾಸನ/805/ಕೆಎಸ್‌ಎಂಸಿಎ/2025-26

ಪ್ರಜೋದಯ ದಿನಪತ್ರಿಕೆ, ಸಂಪಾದಕ, ಪ್ರಕಾಶಕ ಮತ್ತು ಮುದ್ರಕರು, ಜೆ.ಆರ್.ಕೆಂಚೇಗೌಡ, ಗಂಧದ ಕೋಠಿ ಹಿಂಭಾಗ, ಕೆ.ಆರ್.ಪುರಂ.ಹಾಸನ. ದೂರವಾಣಿ : 08172-231188, ಮೊ: 9449203019